**ವಿಶ್ವ ಪ್ರಾರ್ಥನಾ ದಿನ**

**“ಬನ್ನಿರಿ, ನಾನು ನಿಮಗೆ ವಿಶ್ರಾಂತಿಕೊಡುವೆನು”**

**(ಮತ್ತಾಯ 11:28–30)**

**ವಿಶ್ವ ಪ್ರಾರ್ಥನಾ ದಿನ – ನೈಜೀರಿಯಾ ಸಮಿತಿಯಿಂದ ಸಿದ್ಧಪಡಿಸಲಾಗಿದೆ**

**ಮಾರ್ಚ್ 6, 2026**

**ಆರಾಧನಾ ಕ್ರಮ**

**ಉದ್ದೇಶ (INTENTION)**

ಈ ವಿಶೇಷ ಆರಾಧನಾ ಕ್ರಮವು, ನಾವೆಲ್ಲರೂ ದೇವರ ಸಮೀಪಕ್ಕೆ ಬರುವಂತೆಯೂ ದೇವರಲ್ಲಿ ವಿಶ್ರಾಂತಿಯನ್ನು ಹೊಂದಿಕೊಳ್ಳುವಂತೆಯೂ ಕರೆ ನೀಡುವಂಥದ್ದಾಗಿದೆ. ನಾವು ದೇವರ ಮೇಲೆ ಸಂಪೂರ್ಣ ವಿಶ್ವಾಸ ಹಾಗೂ ನಂಬಿಕೆಯಿಟ್ಟಾಗ, ನಮ್ಮ ಭಾರಗಳು ಹಗುರವಾಗುತ್ತವೆ; ನಮ್ಮ ಆತ್ಮಗಳಿಗೆ ವಿಶ್ರಾಂತಿ ದೊರೆಯುತ್ತದೆ.

ಈ ಆರಾಧನಾ ಕ್ರಮವನ್ನು ನೈಜೀರಿಯಾದ ವಿವಿಧ ಸಭೆಗಳ ಕ್ರೈಸ್ತ ಮಹಿಳಾ ಅನ್ಯೋನ್ಯ ಕೂಟದವರು, “ಬನ್ನಿರಿ, ನಾನು ನಿಮಗೆ ವಿಶ್ರಾಂತಿಕೊಡುವೆನು” (ಮತ್ತಾಯ 11:28–30) ಎಂಬ ಶೀರ್ಷಿಕೆಗೆ ಅನುಗುಣವಾಗಿ ಸಿದ್ಧಪಡಿಸಿರುತ್ತಾರೆ. ನೈಜೀರಿಯಾದ ಕ್ರೈಸ್ತ ಮಹಿಳೆಯರ ಅನುಭವಗಳ ಹಿನ್ನೆಲೆಯಿಂದ ಈ ಶೀರ್ಷಿಕೆಯನ್ನು ನಾವು ಒಟ್ಟಾಗಿ ಪ್ರತಿಫಲಿಸಿದ್ದೇವೆ. ಈ ಮೂಲಕ ನಮ್ಮ ಪ್ರಯತ್ನ ಹಾಗೂ ನಿರೀಕ್ಷೆ ವಿಶ್ವದ ಎಲ್ಲಾ ಮಹಿಳೆಯರು ಒಟ್ಟಾಗಿ ಸೇರಿ ಬಂದು, ಏಕ ಮನಸ್ಸಿನಿಂದ ಪ್ರಾರ್ಥಿಸುವುದಾಗಿದೆ. ನಮ್ಮ ಭಾರವನ್ನು ಹೊರುವ ದೇವರ ಮೇಲೆ ನಾವು ನಂಬಿಕೆಯಿಟ್ಟಾಗ, ಕ್ರಿಸ್ತನಲ್ಲಿ ಒಂದೇ ದೇಹವಾಗಿರುವ ನಾವು, ಲೋಕದೆಲ್ಲೆಡೆ ವಿಶ್ರಾಂತಿಯನ್ನು ಸ್ವೀಕರಿಸುವವರಾಗಿಯೂ, ನೀಡುವವರಾಗಿಯೂ ರೂಪುಗೊಳ್ಳುತ್ತೇವೆ.

**ಚಿಹ್ನೆಗಳು (SYMBOLS)**

ಈ ಕೆಳಗಿನ ಚಿಹ್ನೆಗಳನ್ನು ಆರಾಧನಾ ಬಲಿಪೀಠದ ಮುಂಭಾಗದಲ್ಲಿ ಬಳಸಬಹುದು:

**ಬಣ್ಣಬಣ್ಣದ ಆಫ್ರಿಕಾದ ವಸ್ತ್ರಗಳು**

ಈ ವೈವಿಧ್ಯಮಯ ವಸ್ತ್ರಗಳು ಶ್ರೇಷ್ಠ ನೈಜೀರಿಯಾದ ಸಂಸ್ಕೃತಿಗಳನ್ನು ಪ್ರತಿಬಿಂಬಿಸುವಂತದ್ದಾಗಿದೆ. ಪ್ರತಿಯೊಂದು ಮಾದರಿ ಮತ್ತು ಬಣ್ಣ ಪರಂಪರಾಗತ ವೈಶಿಷ್ಟ್ಯಗಳನ್ನು ಮತ್ತು ಅದರ ಅಸ್ಮಿತೆಯ ಕಥೆಗಳನ್ನು ಸಾಕ್ಷಿಕರಿಸುತ್ತವೆ. ದೈನಂದಿನ ಜೀವನದ ಸೌಂದರ್ಯ ಮತ್ತು ಅರ್ಥವನ್ನು ಹೊಲಿಯುವ ನೈಜೀರಿಯಾ ಜನರ ಧೈರ್ಯ ಹಾಗೂ ಸೃಜನಶೀಲತೆಯನ್ನು ಅವು ಎತ್ತಿ ಹಿಡಿಯುತ್ತವೆ. ಈ ಹೊಲಿದ ನೂಲಿನಂತೆಯೇ ನಮ್ಮ ವಿಭಿನ್ನ ಕಥೆಗಳು, ನಮ್ಮ ಹುದುವಾದ ಮಾನವೀಯತೆ ಮತ್ತು ವಿಶ್ವಾಸವು ಒಂದು ವಸ್ತ್ರದಲ್ಲಿ ಪೋಣಿಸಲ್ಪಟ್ಟಿದೆಂಬುದನ್ನು ನೆನಪಿಸುತ್ತವೆ.

**ಹಸಿರು ಮತ್ತು ಬಿಳಿ ಬಣ್ಣಗಳು**

ನೈಜೀರಿಯಾ ಧ್ವಜದ ಹಸಿರು ಮತ್ತು ಬಿಳಿ ಬಣ್ಣಗಳು ವೈವಿಧ್ಯತೆಯಲ್ಲಿರುವ ಏಕತೆ ಮತ್ತು ಭವಿಷ್ಯದ ನಿರೀಕ್ಷೆಯನ್ನು ಸೂಚಿಸುತ್ತವೆ. ಹಸಿರು ಬಣ್ಣವು ಭೂಮಿಯ ಸಮೃದ್ಧತೆಯನ್ನು ಮತ್ತು ಕೃಷಿಯ ಸಂಪತ್ತನ್ನು ಸೂಚಿಸಿದರೆ, ಬಿಳಿ ಬಣ್ಣವು ಶಾಂತಿ ಮತ್ತು ಏಕತೆಯನ್ನು ಸೂಚಿಸುತ್ತದೆ. ನಾವು ದೇವರ ಸೃಷ್ಟಿಯ ಪಾಲಕರಾಗಿಯೂ, ನಮ್ಮ ಸಮುದಾಯಗಳಲ್ಲಿ ಶಾಂತಿಯ ಸಾಧಕರಾಗಿಯೂ ಕರೆಯಲ್ಪಟ್ಟಿರುವುದನ್ನು ಈ ಬಣ್ಣಗಳು ನಮಗೆ ತಿಳಿಸಿ ಹೇಳುತ್ತವೆ.

**ಶೋಕವಸ್ತ್ರ/ದುಃಖದ ವಸ್ತ್ರ**

ಈ ಶೋಕವಸ್ತ್ರವು ನೈಜೀರಿಯಾದ ಬಿಯಾಟ್ರಿಸ್ ಎಂಬ ಒರ್ವ ವಿಧವೆಯ ಕಥೆಯಲ್ಲಿ ವಿವರಿಸಲಾಗಿರುವ ದಬ್ಬಾಳಿಕೆಯ ವ್ಯವಸ್ಥೆಯ ಭಾರವನ್ನು ಪ್ರತಿನಿಧಿಕರಿಸುತ್ತದೆ.

**ಚೀಲ ಅಥವಾ ಶಾಲಾ ಮಕ್ಕಳ ಚೀಲ/ಬ್ಯಾಗ್**

ಇವು ಕೆಲವು ಮಕ್ಕಳಿಗೆ ಎದುರಾಗುವ ಧಾರ್ಮಿಕ ಹಿಂಸೆ ಎಂಬ ಭಾರವನ್ನು ಸೂಚಿಸುತ್ತವೆ; ವಿಶೇಷವಾಗಿ ಉತ್ತರ ನೈಜೀರಿಯಾದ ಜಾಟೊ ಎಂಬ ಒರ್ವ ತಾಯಿಯ ಕಥೆಯಲ್ಲಿ ಇದನ್ನು ವಿವರಿಸಿರುವದನ್ನು ಕಾಣಬಹುದು.

**ಅಕ್ಕಿಯ ಕಣಗಳು**

ಅಕ್ಕಿಯ ಕಣಗಳು ಪರಸ್ಪರ ಸಂಬಂಧಿತ ಬಡತನ ಮತ್ತು ನಿರಾಶೆಯ ಭಾರಗಳನ್ನು ಸೂಚಿಸುತ್ತವೆ; ಆರ್ಥಿಕ ಸಂಕಷ್ಟ ಮತ್ತು ಮಾನಸಿಕ ಆರೋಗ್ಯದ ಹೋರಾಟಗಳ ನಡುವಿನ ಸಂಬಂಧವನ್ನು ಎತ್ತಿ ಹಿಡಿದಿರುವದನ್ನು ಬ್ಲೆಸಿಂಗ್ ಎಂಬ ಒರ್ವ ಸ್ತ್ರೀಯ ಕಥೆಯಲ್ಲಿ ಕಾಣಬಹುದು.

**ಕಲ್ಲುಗಳು**

ಈ ಕಲ್ಲುಗಳು ಬಡತನ, ದಬ್ಬಾಳಿಕೆ, ಅನ್ಯಾಯದಂತಹ ಮಾನವ ಜೀವನದ ಭಾರಗಳನ್ನು ಸೂಚಿಸುತ್ತವೆ. ಇದರೊಂದಿಗೆ ನೈಜೀರಿಯಾದ ಸಂಪನ್ಮೂಲ ಸಂಪತ್ತಿನ ಆಶೀರ್ವಾಗಳನ್ನೂ ಪಂಥಾಹ್ವಾನಗಳನ್ನೂ ನೆನಪಿಸುತ್ತವೆ. ಕ್ರಿಸ್ತನು ನಮ್ಮ ಭಾರವನ್ನು ಹಗುರಗೊಳಿಸುವೆನೆಂದು ವಾಗ್ದಾನ ಮಾಡಿದಂತೆ, ಈ ಕಲ್ಲುಗಳ ಭಾರವನ್ನು ಬೆಳವಣಿಗೆಯ ತಾಣವನ್ನಾಗಿ ಪರಿವರ್ತಿಸಲು ನಮಗೆ ವಿಶೇಷ ಆಹ್ವಾನ ನೀಡಲಾಗಿದೆ.

**ಗಾಜಿನ ಪಾತ್ರೆಯಲ್ಲಿರುವ ಆಲಿವ್ ಎಣ್ಣೆ**

ಇದು ನೈಜೀರಿಯಾದ ಕಚ್ಚಾ ತೈಲದ ಸಂಕೀರ್ಣ ಇತಿಹಾಸವನ್ನು ಸೂಚಿಸುತ್ತದೆ—ಇದು ಒಂದೆಡೆ ಸಮೃದ್ಧಿಯ ಸಾಧ್ಯತೆಯನ್ನು ಸೂಚಿಸುತ್ತದೆ ಮತ್ತು ಇನ್ನೊಂದೆಡೆ ಜಾಗತಿಕ ಶೋಷಣೆಯನ್ನು ಸೂಚಿಸುತ್ತದೆ. ಆರ್ಥಿಕ ಅಭಿವೃದ್ಧಿ ಮತ್ತು ಸೃಷ್ಟಿಯ ಮನೆವಾರ್ತೆತನದ ನಡುವಿನ ಸಮತೋಲನಕ್ಕಾಗಿ ಪ್ರಾರ್ಥಿಸಲು ಇದು ನಮ್ಮನ್ನು ಹುರಿದುಂಬಿಸುವಂತದ್ದಾಗಿದೆ.

**ಮೇಣದ ದೀಪಗಳು**

ನಿರಾಶೆಯ ಮಧ್ಯೆಯಲ್ಲಿರುವ ನಿರೀಕ್ಷೆಯನ್ನು ಮತ್ತು ಕತ್ತಲೆಯ ಅಂತ್ಯದಲ್ಲಿರುವ ಬೆಳಕನ್ನು ಈ ದೀಪಗಳು ಸೂಚಿಸುತ್ತವೆ.

**ಕಲಬಾಶ್ ಪಾತ್ರೆ**

ನೈಜೀರಿಯಾದ ರೈತ ಮಹಿಳೆಯರು ಈ ಪಾತ್ರೆಯನ್ನು ಬಳಸುತ್ತಾರೆ, ಜೀವನದ ಹೋರಾಟಗಳ ಮಧ್ಯೆಯಲ್ಲಿಯೂ ದೇವರು ಪೋಷಣೆ, ಆಹಾರ ಮತ್ತು ವಿಶ್ರಾಂತಿಯನ್ನು ನೀಡುವವನೆಂಬುದನ್ನು ಇದು ಸಾಕ್ಷಿಕರಿಸುತ್ತದೆ.

ಆರಂಭದ ಸ್ತುತಿ ಗೀತೆ – ಕೆಲೆಯಾ (Keleya)

Keleya, keleya nobueze,

keleya keleya nobueze,

kele Jisus nobueze,

Jisus I di nma.

ಅರ್ಥ (ಸಮೂಹವಾಗಿ):

ದೇವರನ್ನು ಸ್ತುತಿಸಿರಿ, ದೇವರನ್ನು ಸ್ತುತಿಸಿರಿ, ಆತನೇ ರಾಜನು;

ಯೇಸುವನ್ನು ಸ್ತುತಿಸಿರಿ, ಆತನೇ ರಾಜನು;

ಯೇಸು, ನೀನು ಒಳ್ಳೆಯವನು.

**ಆರಂಭದ ಪ್ರಾರ್ಥನೆ (OPENING PRAYER)**

ಪ್ರಾರ್ಥನೆ ಮಾಡೋಣ

ಭಾರವನ್ನು ಹೊರುವ ನಮ್ಮ ದೇವರೆ, ನಾವು ನಿನ್ನನ್ನು ಸ್ತುತಿಸಲೂ ಆರಾಧಿಸಲೂ ನಿನ್ನ ಸನ್ನಿಧಿಯೆಡೆಗೆ ಬರುವವರಾಗಿದ್ದೇವೆ. ನೀನು ಆದಿಯೂ ಅಂತ್ಯವೂ ಆಗಿರುವ ಆಲ್ಫಾ ಮತ್ತು ಓಮೇಗಾ ದೇವರಾಗಿದ್ದೀ. ನಿನ್ನಲ್ಲೇ ನಾವು ಜೀವಿಸುವವರಾಗಿದ್ದೇವೆ, ಚಲಿಸುವವರಾಗಿದ್ದೇವೆ ಮತ್ತು ನಮ್ಮ ಅಸ್ತಿತ್ವವನ್ನು ಕಂಡುಕೊಂಡಿದ್ದೇವೆ. ನಿನ್ನ ನಾಮದಲ್ಲಿ ಇಬ್ಬರು ಅಥವಾ ಮೂವರು ಕೂಡಿರುವಲ್ಲಿ ನೀನು ಇರುವೆನೆಂದು ಕೊಟ್ಟ ವಾಗ್ದಾನವನ್ನು ನಂಬಿ ನಾವು ಇಲ್ಲಿ ಕೂಡಿ ಬಂದಿದ್ದೇವೆ. ಆದಕಾರಣ, ನಮ್ಮ ಮಧ್ಯೆ ನಿನ್ನ ಪ್ರಸನ್ನತೆಯನ್ನು ಸ್ವಾಗತಿಸಿ ಸಂಭ್ರಮಿಸುತ್ತೇವೆ.

ಈ ಆರಾಧನೆಯನ್ನು ನಿನ್ನ ಕೈಗಳಲ್ಲಿ ಸಮರ್ಪಿಸುತ್ತೇವೆ, ನೀನು ನಮ್ಮ ಸಂಗಡ ಪ್ರಸನ್ನನಾಗಬೇಕೆಂದು ಬೇಡಿಕೊಳ್ಳುತ್ತೇವೆ. ನೀನು ನಮಗೆ ನೀಡುತ್ತಿರುವ ಪರಿಶುದ್ಧಾತ್ಮನನ್ನು ತೆರೆಯಲು ಶಕ್ತಿ ಕೊಡು; ಮತ್ತು ನಿನ್ನ ಪ್ರಸನ್ನತೆ ಈ ಸ್ಥಳವನ್ನು ಸಂಪೂರ್ಣವಾಗಿ

ಆವರಿಸಿಕೊಳ್ಳಲೆಂದು ಯೇಸು ಕ್ರಿಸ್ತನ ನಾಮದಲ್ಲಿ ಬೇಡಿಕೊಳ್ಳುತ್ತೇವೆ. ಆಮೆನ್.

**ಸ್ವಾಗತ ಮಾತುಗಳು (WORDS OF WELCOME)**

ಪ್ರೀತಿಯ ಸಹೋದರ ಸಹೋದರಿಯರೇ, ಲೋಕದ ವಿವಿಧ ಭಾಗಗಳಿಂದ ಬಂದಿರುವ ಎಲ್ಲರಿಗೂ ಹಾರ್ದಿಕ ಸ್ವಾಗತವನ್ನು ಕೋರುತ್ತೇವೆ. ಸಾಮೂಹಿಕ ಧ್ವನಿಗಳನ್ನು, ಪ್ರಾರ್ಥನೆ ಮತ್ತು ಪರಿಶ್ರಮದಲ್ಲಿ ಐಕ್ಯತೆಯನ್ನು ಎತ್ತಿ ಹಿಡಿಯಲು ಈ ದಿನ ನಾವು ಒಟ್ಟಾಗಿ ಸೇರಿಬಂದಿದ್ದೇವೆ.

"ಬನ್ನಿರಿ, ನಾನು ನಿಮಗೆ ವಿಶ್ರಾಂತಿಕೊಡುವೆನು" ಎಂಬ ನಮ್ಮ ಶೀರ್ಷಿಕೆಯು ಮತ್ತಾಯ 11:28ರ ಯೇಸುವಿನ ಆಹ್ವಾನದಿಂದ ಪ್ರೇರಿತವಾಗಿದೆ. ಯೇಸು ಹೆಚ್ಚು ಭಾರದಿಂದ ಕುಗ್ಗಿ ಹೋಗಿರುವ ಎಲ್ಲರಿಗೂ ಹೃದಯಪೂರ್ವಕ ಕರೆ ನೀಡುವವನಾಗಿದ್ದಾನೆ. ಆದ್ದರಿಂದ, ಇದ್ದ ಸ್ಥಿತಿಯಲ್ಲಿಯೇ ಬನ್ನಿರಿ; ನಿಮ್ಮ ಮೇಲೆ ಇರುವ ಎಲ್ಲ ಭಾರಗಳನ್ನು ತಂದು, ನಿಮ್ಮ ಆತ್ಮಗಳಿಗೆ ವಿಶ್ರಾಂತಿಯನ್ನು ಹೊಂದಿಕೊಳ್ಳಿರಿ.

ನೀವು ಲೋಕದ ಯಾವ ಭಾಗದಲ್ಲಿದ್ದರೂ ನೈಜೀರಿಯಾದ ಕ್ರೈಸ್ತ ಮಹಿಳೆಯರು ನಿಮ್ಮನ್ನು ಕರೆಯುತ್ತಿದ್ದಾರೆ—ಬಂದು ನಿಮ್ಮ ಆತ್ಮಗಳಿಗೆ ವಿಶ್ರಾಂತಿಯನ್ನು ಹೊಂದಿಕೊಳ್ಳಿರಿ ಎಂಬುದಾಗಿ ಕರೆಯುತ್ತಿದ್ದಾರೆ. ನಾವು ಒಟ್ಟಾಗಿ ಆರಾಧಿಸುವಾಗ, ಪರಸ್ಪರ ಭಾರವನ್ನು ಹೊತ್ತುಕೊಳ್ಳುವಾಗ, ನಮ್ಮ ಐಕ್ಯತೆಯಲ್ಲಿ ಹೊಸ ಬಲವನ್ನು ಪಡೆದುಕೊಳ್ಳೋಣ. ಕ್ರಿಸ್ತನ ಪ್ರೀತಿಯ ಅಂಗಳದಲ್ಲಿ ಒಂದಾಗಿರುವ ನಮಗೆ ಒಟ್ಟಾಗಿ ಸೇರಿರುವ ಭಾವನೆ ನಮ್ಮದಾಗಲಿ.

**ಆಮಂತ್ರಣ ಸಂಗೀತೆ – Art Thou Weary**

Art Thou Weary ಎಂಬ ಈ ಸಂಗೀತ ನೈಜೀರಿಯಾವನ್ನು ಸೇರಿಸಿ ಲೋಕದಾದ್ಯಂತ ಪರಿಚಿತವಾಗಿದ್ದು, ಎಲ್ಲಾ ಪಂಥಗಳಲ್ಲಿಯೂ ಪ್ರೀತಿಯಿಂದ ಹಾಡಲ್ಪಡುವ ಸಂಗೀತವಾಗಿದೆ.

ವಿಶ್ವ ಪ್ರಾರ್ಥನಾ ದಿನ – ದಣಿದ ಆತ್ಮಗಳಿಗೆ ವಿಶ್ರಾಂತಿ ನೀಡುವ ಯೇಸುವಿನ ಶಾಶ್ವತ ಆಹ್ವಾನಕ್ಕೆ ಪ್ರತಿಯಾಗಿ, ನಾವು ಈ ಸಂಗೀತವನ್ನಕ ಒಟ್ಟಾಗಿ ಹಾಡೋಣ.

ಸಂಗೀತ 196

1.ಉಂಟೋ ನಿನಗೆ ಆಯಾಸ

ಬೇಸರಿಕೆಯೂ?

ಯೇಸುವಿನ ಹತ್ರ ಬಂದು

ತೀರಿಸು.

2.ಆತನನ್ನರಿಯುವ ಹಾಗೆ

ಏನು ಗುರುತು?

ಪಕ್ಕೆಕಾಲು ಕೈಗಳಲ್ಲಿ

ಗಾಯವು.

3.ರಾಜನಂತೆ ಶಿರದಲ್ಲಿ

ಮುಕುಟವುಂಟೇ;

ನಿಜವೇ, ಕಿರೀಟ ಉರಟು…

ಮುಳ್ಳಿಂದೇ.

4.ಅತ ಯಾವ ಬಹುಮಾನ

ಇಲ್ಲಿ ಕೊಟ್ಟಾನು?

ಶಾನೆ ದುಃಖಿ, ಶಾನೆ ಕಷ್ಟ

ಕಣ್ಣೀರು.

5.ಅಂತ್ಯದಲ್ಲೆಂಗತಿಯೇನು

ಸ್ಥಿರನಾದರೆ?

ಸರ್ವದುಃಖ ಕಷ್ಟ ಸಾವ

ಜೈಸಿದ್ದೇ.

6.ನನ್ನ ತಳ್ಳಿಬಿಟ್ಟಾನೇನೋ

ಹರಸೆನ್ನಲು

ಭೂಮ್ಯಾಕಾಶ ಬಿದ್ದೋದಾಗ್ಯೂ

ತಳ್ಳನು.

7.ನಂಬಿ ಸೈರಿಸಿದವಂಗೆ

ಉಂಟೇ ಭಾಗ್ಯವು?

ಉಂಟು ಎಂದು ಸರ್ವಸಭೆ

ಅನ್ನುತ್ತೆ.

**ಚಿಯೋಮಾಳ ಭಾರ (CHIOMA'S BURDEN)**

ನಿರೂಪಣೆಗಾರರು(Narrator):

ನೈಜೀರಿಯಾದ ಒಂದು ಪ್ರಾಥಮಿಕ ಶಾಲೆಯಲ್ಲಿ, ಚಿಯೋಮಾ ಎಂಬ ಬಾಲಕಿ ಆತ್ಮವಿಶ್ವಾಸದ ಕೊರತೆಯಿಂದ ಬಳಲುತ್ತಾಳೆ. ಸಹಪಾಠಿಗಳ ಜೊತೆ ಹೆಜ್ಜೆ ಹಾಕಲು ಹೋರಾಟ ಮಾಡುತ್ತಾಳೆ. ಈ ಚಿಕ್ಕ ನಾಟಕವು, ನಮ್ಮಲ್ಲಿ ಅತಿ ಚಿಕ್ಕವರೂ ಸಹ ಭಾರಗಳನ್ನು ಹೊತ್ತಿರುತ್ತಾರೆ ಎಂಬುದನ್ನು ನಮಗೆ ನೆನಪಿಸುವಂತದ್ದಾಗಿದೆ. ಜೀವನದ ಪ್ರತಿ ಹಂತದಲ್ಲಿ ಸದಾ ಇರುವ ಸವಾಲುಗಳನ್ನೂ ವಿಭಿನ್ನತೆಗಳನ್ನೂ ಪ್ರತಿಬಿಂಬವ ಕಥೆಯಾಗಿದೆ.

(ಡೂಪೆ ಮತ್ತು ಗೋಡಿಯಾ ತರಗತಿಯಲ್ಲಿ ಇದ್ದಾರೆ. ವಿರಾಮದ ಗಂಟೆ ಬಾರಿಸಲಾಗುತ್ತದೆ.)

ಡೂಪೆ: ಗೋಡಿಯಾ, ವಿರಾಮ ಸಮಯ! ಚಿಯೋಮಾಳನ್ನು ನೋಡೋಣ ಬಾ.

ಗೋಡಿಯಾ: ಸರಿ, ಹೋಗೋಣ.

(ಅವರು ಚಿಯೋಮಾಳ ಬಳಿ ಬರುತ್ತಾರೆ; ಅವಳು ದುಃಖದಿಂದ ತಲೆ ತಗ್ಗಿಸಿಕೊಂಡಿದ್ದಾಳೆ.)

ಗೋಡಿಯಾ: ಚಿಯೋಮಾ, ನೀನು ಚೆನ್ನಾಗಿದ್ದೀಯಾ?

ಡೂಪೆ: ನೀನು ದುಃಖವಾಗಿರುವಂತೆ ಕಾಣಿಸುತ್ತದಲ್ಲ?

ಚಿಯೋಮಾ: (ಅಳುತ್ತಾ) ಗುರುಗಳು ನಾನು ಯಾವುದಕ್ಕೂ ಪ್ರಯೋಜನವಿಲ್ಲ ಎಂದರು. ನೀವು ಹೊಸ ತರಗತಿಗೆ ಹೋಗಿದ್ದೀರಿ; ನಾನು ಇನ್ನೂ ನಾಲ್ಕನೇ ತರಗತಿಯಲ್ಲೇ ಇದ್ದೇನೆ. ಈ ಸುಲಭವಾದ ಗಣಿತವೂ ನನ್ನ ತಲೆಗೆ ಹತ್ತುತ್ತಿಲ್ಲ!

(ಚಿಯೋಮಾ ಹೆಚ್ಚು ಅಳುತ್ತಾಳೆ)

ಚಿಯೋಮಾ: ಮತ್ತೆ ನಾನು ಪರೀಕ್ಷೆಯಲ್ಲಿ ವೈಫಲ್ಯತೆ ಹೊಂದಿದರೆ, ನನ್ನ ಅಪ್ಪ ಶಾಲಾ ಶುಲ್ಕವನ್ನೇ ಕೊಡೋದಿಲ್ಲ ಎಂದಿದ್ದಾರೆ!

ಗೋಡಿಯಾ: ಆ ಮಾತುಗಳನ್ನು ಕೇಳಬೇಡ ಚಿಯೋಮಾ! ನೀನು ಅಂಗನವಾಡಿಯಲ್ಲಿ ತುಂಬಾ ಚೆನ್ನಾಗಿದ್ದೆ. ಮತ್ತೆ ನೀನು ಚೆನ್ನಾಗಿ ಓದಬಲ್ಲೆ.

ಡೂಪೆ: ಹೌದು! ನನಗೆ ಮೊದಲ ಮತ್ತು ಎರಡನೇ ತರಗತಿಯಲ್ಲಿ "ನಿಧಾನವಾದ ಬಾಲಕಿ" ಎಂದೇ ಕರೆಯುತ್ತಿದ್ದರು. ಆದರೆ ನಂತರ ನಾನು ಸುಧಾರಿಸಿಕೊಂಡೆ.

ಚಿಯೋಮಾ: (ಕಣ್ಣೀರು ಒರೆಸುತ್ತಾ) ನಿಜವಾ? ಹೇಗೆ?

ಡೂಪೆ: ನನ್ನ ಅಪ್ಪ-ಅಮ್ಮ ನನಗಾಗಿ ಪ್ರಾರ್ಥಿಸಿದರು. ಅಮ್ಮ ನನಗೆ ಒಂದು ಚಿಕ್ಕ ವಿಶೇಷ ಪ್ರಾರ್ಥನೆಯನ್ನು ಕಲಿಸಿದರು. ನೀನು ಪ್ರಯತ್ನ ಮಾಡಿ ನೋಡುತ್ತೀಯಾ?

ಚಿಯೋಮಾ: ಸರಿ…

ಡೂಪೆ: ನನ್ನ ಹಾಗೆಯೇ ಹೇಳು:

ಡೂಪೆ: ದೇವರೆ, ನಾನು ನಿನ್ನ ಮಗು.

ಚಿಯೋಮಾ: ದೇವರೆ, ನಾನು ನಿನ್ನ ಮಗು.

ಡೂಪೆ: ನಾನು ಬುದ್ಧಿವಂತಳು.

ಚಿಯೋಮಾ: ನಾನು ಬುದ್ಧಿವಂತಳು.

ಡೂಪೆ: ನಾನು ಕಲಿಯಬಲ್ಲೆ, ಬೆಳೆಯಬಲ್ಲೆ.

ಚಿಯೋಮಾ: ನಾನು ಕಲಿಯಬಲ್ಲೆ, ಬೆಳೆಯಬಲ್ಲೆ.

ಡೂಪೆ: ಆಮೆನ್.

ಚಿಯೋಮಾ: ಆಮೆನ್.

ಗೋಡಿಯಾ: ಚಿಯೋಮಾ, ಯೇಸು ನಿನ್ನ ಸ್ನೇಹಿತನೆಂದು ನೆನಪು ಮಾಡಿಕೊ. ಆತನು ನಿನ್ನ ಎಲ್ಲಾ ಸಮಸ್ಯೆಗಳಿಗೆ ಸಹಾಯ ಮಾಡಬಲ್ಲನು.

ಡೂಪೆ: ಹೌದು! ಭಯವಾಗಿದ್ರೆ ಅಥವಾ ದುಃಖವಾದ್ರೆ ಯೇಸುವಿನ ಜೊತೆ ಮಾತಾಡು.

ಚಿಯೋಮಾ: (ಸ್ವಲ್ಪ ನಗುತ್ತಾ) ಧನ್ಯವಾದಗಳು. ನೀವು ಒಳ್ಳೆಯ ಸ್ನೇಹಿತರು.

(ಮೂರು ಹುಡುಗಿಯರು ಕೈ ಹಿಡಿದುಕೊಳ್ಳುತ್ತಾರೆ)

ಎಲ್ಲರೂ: ಯೇಸುವೇ, ನಮ್ಮ ಸ್ನೇಹಿತನಾಗಿಯೂ ಸಹಾಯಕನಾಗಿಯೂ ಇರುತ್ತಿರುವುದಕ್ಕಾಗಿ ಧನ್ಯವಾದಗಳು!

(ಅವರು ಅಪ್ಪಿಕೊಳ್ಳುತ್ತಾರೆ)

ವಿವರಣಾಕಾರ: ಎರಡು ತಿಂಗಳ ನಂತರ…

ಮುಖ್ಯ ಶಿಕ್ಷಕ: ಎಲ್ಲರೂ ಜೋರಾಗಿ ಕೈತಟ್ಟಿ! ಚಿಯೋಮಾ ಇಡೀ ತರಗತಿಯಲ್ಲಿ ಎರಡನೇ ಸ್ಥಾನ ಪಡೆದಿದ್ದಾಳೆ!

ಡೂಪೆ: (ಚಿಯೋಮಾಳನ್ನು ಅಪ್ಪಿಕೊಳ್ಳುತ್ತಾ) ನೋಡಿದಿಯಾ? ಯೇಸು ನಿನಗೆ ಸಹಾಯ ಮಾಡಿದ್ದಾನೆ!

ಚಿಯೋಮಾ: (ಹರ್ಷದಿಂದ) ಹೌದು! ಈಗ ನನಗೆ ತುಂಬಾ ಸಂತೋಷ. ಧನ್ಯವಾದಗಳು ಯೇಸುವೇ!

ಎಲ್ಲರೂ: ಚಿಯೋಮಾಕ್ಕೆ ಜಯವಾಗಲಿ!

**ದೇವರ ವಾಕ್ಯ ಪಾರಾಯಣ**

**ಮತ್ತಾಯ 11:28–30**

ನಾಯಕ: ಇದೀಗ ನಮ್ಮ ಹೃದಯಗಳನ್ನೂ ಮನಸ್ಸುಗಳನ್ನೂ ಮತ್ತಾಯನ ಸುವಾರ್ತೆಯಲ್ಲಿ ಯೇಸು ಹೇಳಿದ ವಾಕ್ಯಗಳ ಕಡೆಗೆ ತಿರುಗಿಸೋಣ. ದೇವರ ಹೃದಯದಿಂದ ಬಂದ ಕೃಪೆಯನ್ನು ಈ ವಾಕ್ಯಗಳ ಮೂಲಕ ಕೇಳಿಸಿಕೊಳ್ಳೋಣ.

[28] ಎಲೈ ಕಷ್ಟಪಡುವವರೇ, ಹೊರೆಹೊತ್ತವರೇ, ನೀವೆಲ್ಲರೂ ನನ್ನ ಬಳಿಗೆ ಬನ್ನಿರಿ; ನಾನು ನಿಮಗೆ ವಿಶ್ರಾಂತಿಕೊಡುವೆನು. [29] ನಾನು ಸಾತ್ವಿಕನೂ ದೀನಮನಸ್ಸುಳ್ಳವನೂ ಆಗಿರುವದರಿಂದ ನನ್ನ ನೊಗವನ್ನು ನಿಮ್ಮ ಮೇಲೆ ತೆಗೆದುಕೊಂಡು ನನ್ನಲ್ಲಿ ಕಲಿತುಕೊಳ್ಳಿರಿ; [30] ಆಗ ನಿಮ್ಮ ಆತ್ಮಗಳಿಗೆ ವಿಶ್ರಾಂತಿ ಸಿಕ್ಕುವದು. ಯಾಕಂದರೆ ನನ್ನ ನೊಗವು ಮೃದುವಾದದ್ದು; ನನ್ನ ಹೊರೆಯು ಹೌರವಾದದ್ದು ಅಂದನು.

ಪ್ರತಿಕ್ರಿಯೆ (ಸಭೆ):

ನಾಯಕ: ದಣಿದಿರುವ ಎಲ್ಲರೂ ಯೇಸುವಿನ ಬಳಿಗೆ ಬನ್ನಿರಿ.

ಸಭೆ: ನಾವು ಬರುತ್ತೇವೆ.

ನಾಯಕ: ಭಾರ ಹೊತ್ತಿರುವ ಎಲ್ಲರೂ ಬನ್ನಿರಿ.

ಸಭೆ: ನಾವು ಬರುತ್ತೇವೆ.

ನಾಯಕ: ದೇವರು ನಿಮಗೆ ವಿಶ್ರಾಂತಿ ನೀಡುವನು.

ಸಭೆ: ದೇವರು ನಮಗೆ ವಿಶ್ರಾಂತಿ ನೀಡುವನು.

ನಾಯಕ: ಯೇಸು ನೀಡುವ ನೊಗವನ್ನು ಸ್ವೀಕರಿಸಿರಿ; ಅದು ಸುಲಭ, ಹಗುರ.

ಸಭೆ: ನಾವು ಈ ನೊಗವನ್ನು ಸ್ವೀಕರಿಸುತ್ತೇವೆ.

ನಾಯಕ: ದೀನನೂ ಮೃದು ಮನಸ್ಸುಳ್ಳವನೂ ಆಗಿರುವ ಕ್ರಿಸ್ತನಿಂದ ಕಲಿಯಿರಿ.

ಸಭೆ: ನಾವು ಕಲಿಯಲು ಬಂದಿದ್ದೇವೆ.

ನಾಯಕ: ನಿಮ್ಮ ಆತ್ಮಗಳಿಗೆ ವಿಶ್ರಾಂತಿ ದೊರೆಯುವುದು.

ಸಭೆ: ದೇವರಿಗೆ ಸ್ತೋತ್ರವಾಗಲಿ. ಆಮೆನ್

**ಕಥೆಗಳು ಮತ್ತು ಪ್ರಾರ್ಥನೆಗಳು**

ಪ್ರಿಯ ಕ್ರಿಸ್ತನಲ್ಲಿ ಸಹೋದರ ಸಹೋದರಿಯರೇ, ಇದೀಗ ಯೇಸು ನಮ್ಮನ್ನು ದೃಷ್ಟಿಸಿ "ಬನ್ನಿ" ಎಂದು ಕರೆಯುತ್ತಿರುವುದನ್ನು ನಾವು ಕೇಳಿದ್ದೇವೆ. ನಮ್ಮ ಭಾರಗಳನ್ನು ತಂದು, ನಮ್ಮ ಆತ್ಮಗಳಿಗೆ ವಿಶ್ರಾಂತಿ ಪಡಕೊಳ್ಳುವಂತೆ ನಮ್ಮನ್ನು ಆಹ್ವಾನಿಸುತ್ತಿದ್ದಾನೆ. ಆದ್ದರಿಂದ ಈಗ ನಾವು ನಮ್ಮ ಹೃದಯಗಳನ್ನು ತೆರೆಯೋಣ. ನಮ್ಮ ನೈಜೀರಿಯಾದ ಸಹೋದರಿಯರ ಮೂವರ ಕಥೆಗಳನ್ನು ಆಲಿಸೋಣ. ಈ ಸಾಕ್ಷ್ಯಗಳು ಅವರ ಅನುಭವಗಳನ್ನು ಪ್ರತಿಬಿಂಬಿಸುತ್ತವೆ. ಇವು ವಿಶ್ವದಾದ್ಯಂತ ಅನೇಕರು ಎದುರಿಸುತ್ತಿರುವ ಹೋರಾಟಗಳ ಪ್ರತಿರೂಪವಾಗಿವೆ.

ನೈಜೀರಿಯಾದಲ್ಲಿ ಬಳಸುವ ಒಂದು ನುಡಿಗಟ್ಟು ಇದೆ: "ಒಬ್ಬರ ನೋವು ಎಲ್ಲರ ನೋವು."

ಈ ಕಥೆಗಳನ್ನು ಕೇಳುವಾಗ, ಈ ಮಹಿಳೆಯರಲ್ಲಿ ಪ್ರತಿಯೊಬ್ಬರನ್ನು ತಾಕುವ ಸಂಗತಿಯು ನಮ್ಮನ್ನೂ ತಾಕುತ್ತದೆ ಎಂಬುದನ್ನು ನೆನಪಿಸುತ್ತದೆ. ನಾವು ದೌರ್ಜನ್ಯವನ್ನು ಜಯಿಸುವ ವಿಧವೆಯರ ಕಥೆಗಳನ್ನು ಕೇಳುತ್ತೇವೆ, ತಮ್ಮ ಪುತ್ರಿಯರನ್ನು ಶಾಲೆಗೆ ಕಳುಹಿಸಲು ಧೈರ್ಯ ಕಂಡುಕೊಳ್ಳುವ ತಾಯಂದಿರ ಕಥೆಗಳನ್ನು ಕೇಳುತ್ತೇವೆ, ಮತ್ತು ಪ್ರತಿದಿನದ ಸವಾಲುಗಳು ಜನರ ನಂಬಿಕೆಯನ್ನು ಪರೀಕ್ಷಿಸುವ ಅನುಭವಗಳನ್ನು ಕೇಳುತ್ತೇವೆ – ಇವು ಸಂಸ್ಕೃತಿಗಳು ಮತ್ತು ಗಡಿರೇಖೆಗಳನ್ನು ದಾಟಿ ನಮ್ಮೆಲ್ಲರಿಗೂ ಪರಿಚಿತವಾದ ಅನುಭವಗಳೇ ಆಗಿವೆ. ಈ ಕಥೆಗಳು ನಮ್ಮನ್ನು ನಿರಾಶೆಗೆ ತಳ್ಳಲು ಕೊಡಲ್ಪಟ್ಟದಲ್ಲ, ಇದಕ್ಕೆ ವಿರುದ್ಧವಾಗಿ, ಅತ್ಯಂತ ಕಷ್ಟಕರ ಸಂದರ್ಭಗಳಲ್ಲಿಯೂ ದೇವರು ಹೇಗೆ ನಿಜವಾದ ವಿಶ್ರಾಂತಿಯನ್ನು ನೀಡುತ್ತಾನೆ ಎಂಬುದನ್ನು ಎತ್ತಿ ಹಿಡಿಯುವ ಸಾಕ್ಷಿಗಳಾಗಿವೆ. ಭಾರವನ್ನು ಹೊತ್ತುಕೊಂಡಿರುವ ವಿಶ್ವದಾದ್ಯಂತ ಎಲ್ಲರೊಂದಿಗೆ ನಾವು ಪ್ರಾರ್ಥನೆಗೆ ನಮ್ಮ ಧ್ವನಿಗಳನ್ನು ಎತ್ತುವಂತೆ, ಪವಿತ್ರಾತ್ಮನು ಈ ಸಾಕ್ಷ್ಯಗಳ ಮೂಲಕ ಮಾತನಾಡಲಿ. ನಾವು ಕ್ರಿಸ್ತನಲ್ಲಿ ಒಂದೇ ದೇಹವಾಗಿದ್ದೇವೆ. ಒಂದು ಅಂಗಕ್ಕೆ ನೋವು ಉಂಪಾದರೆ, ಎಲ್ಲ ಅಂಗಗಳಿಗೂ ನೋವು ಉಂಟಾಗುತ್ತದೆ. ಆದರೆ ಯೇಸುವಿನಲ್ಲಿ ಒಬ್ಬರು ವಿಶ್ರಾಂತಿ ಕಂಡುಕೊಂಡಾಗ, ನಾವೆಲ್ಲರೂ ಸೇರಿ ಸಂತೋಷಿಸಬಹುದು, ವಿಶ್ರಾಂತಿಯನ್ನು ಕಂಡುಕೊಳ್ಳಬಹುದು! ನಾವು ಕೇಳಲು ನಮ್ಮ ಕಿವಿಗಳನ್ನು, ಅನುಭವಿಸಲು ನಮ್ಮ ಹೃದಯಗಳನ್ನು, ಅರ್ಥಮಾಡಿಕೊಳ್ಳಲು ನಮ್ಮ ಮನಸ್ಸುಗಳನ್ನು ತೆರೆಯೋಣ. ಬಂದು ವಿಶ್ರಾಂತಿ ಪಡೆಯಿರಿ ಎಂದು ಕರೆಯುವ ಅದೇ ದೇವರು, ಈ ಕಥೆಗಳ ಮೂಲಕ ನಮಗೆ ಪ್ರೇರಣೆಯನ್ನು ನೀಡುವನು, ಖಂಡಾಂತರಗಳನ್ನು

ದಾಟಿ ಕರುಣೆ ಮತ್ತು ನಿರೀಕ್ಷೆಯಲ್ಲಿ ನಮ್ಮನ್ನು ಏಕ ರೀತಿಯಲ್ಲಿ ಸೇರಿಸುವ ಶಕ್ತಿಗೆ ಹಾಗೂ ನಂಬಿಕೆಯ ಪ್ರಾರ್ಥನೆಗೆ ನಮ್ಮನ್ನು ನಡೆಸುವವನಾಗಿದ್ದಾನೆ.

ಮುಖ್ಯ ಶೀರ್ಷಿಕೆಯ ಗೀತೆ – "ನನ್ನ ಬಳಿಗೆ ಬನ್ನಿರಿ" "ನನ್ನ ಬಳಿಗೆ ಬನ್ನಿರಿ" ಎಂಬ ಈ ಗೀತೆಯನ್ನು ವಿಶ್ವ ಪ್ರಾರ್ಥನಾ ದಿನದ ಆರಾಧನೆಗಾಗಿ ವಿಶೇಷವಾಗಿ ರಚಿಸಲಾಗಿದೆ.

ದೇವರ ಹೃದಯದಿಂದ ಬರುವ ಈ ಕರೆಯನ್ನು ನಾವು ಸೇರಿ ಹಾಡೋಣ.

Are you down and feeling lonely,

Are you weary and oppressed,

You don't have to be discouraged,

Jesus says "Come unto me."

Refrain:

Come, come unto me, (2x)

Come, you who are weary, and I will give you rest.

Come, come unto me, (2x)

Come, you who are burdened, and I will give you rest.

Tell your brother and your sister that the Saviour is a friend.

He offers you his shoulder, lean on him and you'll find rest.

**ಬಿಯಾಟ್ರಿಸ್ ಅವರ ಕಥೆ: ವ್ಯವಸ್ಥಿತ ದಬ್ಬಾಳಿಕೆಯ ಭಾರ**

ನನ್ನ ಹೆಸರು ಬಿಯಾಟ್ರಿಸ್. ನಾನು 28 ವರ್ಷದ ವಯಸ್ಸಿನಲ್ಲಿ ವಿಧವೆಯಾದೆ. ಒಂದು ಸಮುದಾಯ ಸಂಘರ್ಷದಲ್ಲಿ ನನ್ನ ಗಂಡನನ್ನು ಕಳೆದುಕೊಂಡೆ. ಆ ದಿನ ನಾನು ಕೇವಲ ನನ್ನ ಜೀವನ ಸಂಗಾತಿಯನ್ನು ಮಾತ್ರವಲ್ಲ, ನನ್ನ ಸಮಾಜದಲ್ಲಿನ ಸ್ಥಾನವನ್ನೂ ಕಳೆದುಕೊಂಡೆ. ಅಕಸ್ಮಾತ್ತಾಗಿ, ಮೂರು ಚಿಕ್ಕ ಮಕ್ಕಳೊಂದಿಗೆ ನಾನು ಒಂಟಿಯಾಗಿಬಿಟ್ಟೆ; ನನ್ನ ವಿರುದ್ಧವೇ ತಿರುಗಿದಂತೆ ತೋರುವ ಜಗತ್ತನ್ನು ಎದುರಿಸಬೇಕಾಯಿತು. ನೈಜೀರಿಯಾದಲ್ಲಿ ವಿಧವೆಯಾಗಿ ಬದುಕುವುದು ಅಪಾರ ಹೋರಾಟವಾಗಿದೆ. ಬಡತನವು ನಮ್ಮನ್ನು ಬಲವಾಗಿ ಹೊಡೆದಿತು. ನಮ್ಮ ಪ್ರಮುಖ ಆದಾಯ ಮೂಲವನ್ನು ಕಳೆದುಕೊಂಡೆ; ಏಕೈಕ ತಾಯಿಯಾಗಿ ಕೆಲಸ ಹುಡುಕುವುದು ಬಹಳ ಕಷ್ಟವಾಯಿತು. ನನ್ನ ಅತ್ತೆ-ಮಾಮಂದಿರು ನಮ್ಮನ್ನು ಬೆಂಬಲಿಸುವರೆಂದು ಭಾವಿಸಿದ್ದೆ; ಆದರೆ ಅವರು ಅನುಮಾನದಿಂದ ವರ್ತಿಸಿ, ನನ್ನ ಗಂಡನು ಬಿಟ್ಟುಹೋದ ಸ್ವಲ್ಪ ಆಸ್ತಿಯನ್ನೂ ಕಸಿದುಕೊಳ್ಳಲು ಯತ್ನಿಸಿದರು. ಅನೇಕ ದಿನಗಳು ನನ್ನ ಮಕ್ಕಳಿಗೆ ಊಟ ನೀಡುವುದು ಹೇಗೆ, ಅವರ ಶಾಲಾ ಶುಲ್ಕವನ್ನು ಹೇಗೆ ಪಾವತಿಸುವುದು ಎಂಬುದು ನನಗೆ ಗೊತ್ತಿರಲಿಲ್ಲ. ಆದರೂ, ನನ್ನ ಅತ್ಯಂತ ಕತ್ತಲೆಯ ಕ್ಷಣಗಳಲ್ಲಿ, ನನ್ನ ವಿಶ್ವಾಸದಲ್ಲೂ ಮತ್ತು ಇತರ ವಿಧವೆಯರ ಸಮುದಾಯದಲ್ಲೂ ನಾನು ಶಕ್ತಿಯನ್ನು ಕಂಡುಕೊಂಡೆ. ನನ್ನ ಸ್ಥಳೀಯ ಸಭೆಯು ಆಯೋಜಿಸಿದ್ದ ಒಂದು ಬೆಂಬಲ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದನ್ನು ನಾನು ನೆನಪಿಸಿಕೊಳ್ಳುತ್ತೇನೆ. ಅವರು 50 ವಿಧವೆಯರನ್ನು ಆಹ್ವಾನಿಸಿದ್ದರು, ಆದರೆ ನೂರಾರು ಮಂದಿ ಬಂದಿದ್ದರು. ಆ ದಿನ ನಾನು ಅರಿತುಕೊಂಡದ್ದೇನಂದರೆ — ನನ್ನ ಹೋರಾಟದಲ್ಲಿ ನಾನು ಒಬ್ಬಂಟಿಗಳಲ್ಲ. ನನ್ನನ್ನು ಅತ್ಯಂತ ಪ್ರೇರೇಪಿಸಿದುದು ನನ್ನ ಸಹವಿಧವೆಯರ ಸ್ಥೈರ್ಯ ಮತ್ತು ವಿಶ್ವಾಸ. ಅನೇಕ ಸಂಕಷ್ಟಗಳ ನಡುವೆಯೂ, ನಾವು ಕ್ರಿಸ್ತನಿಗೆ ನಿಷ್ಠೆಯುಳ್ಳವರಾಗಿದ್ದೇವು. ಯೇಸುವನ್ನು ನಮ್ಮ ಭಾರವನ್ನು ಹೊರುವ ಕರ್ತನಾಗಿ ತಿಳಿದು, ಆತನಲ್ಲಿ ಸಮಾಧಾನವನ್ನು ಕಂಡುಕೊಳ್ಳುತ್ತೇವೆ. ಚಿಕ್ಕ ಮಕ್ಕಳೊಂದಿಗೆ ಇರುವ ಯುವ ವಿಧವೆಯರು ಕೂಡ ಸಭೆಯಲ್ಲಿ ದಣಿವಿಲ್ಲದೆ ಸೇವೆ ಮಾಡುವುದನ್ನು ನಾನು ಕಂಡಿದ್ದೇನೆ; ಅವರ ಪರಿಸ್ಥಿತಿಗಳು ಅವರ ವಿಶ್ವಾಸವನ್ನು ಕುಂದಿಸಿಲ್ಲ. ನಮ್ಮ ಸಮುದಾಯದಲ್ಲಿದ್ದ ಒಬ್ಬ ವಿಧವೆ, ತನ್ನ ಗಂಡನನ್ನು ಕಳೆದುಕೊಂಡ ನಂತರ, ಇತರ ವಿಧವೆಯರಿಗೆ ಸಹಾಯ ಮಾಡುವ ಕಾರ್ಯಕ್ರಮವನ್ನು ಆರಂಭಿಸಿದರು. ಬಟ್ಟೆ, ಅಕ್ಕಿ ಮತ್ತು ಹಣವನ್ನು ದಾನ ಮಾಡಲು ಜನರನ್ನು ಪ್ರೇರೇಪಿಸಿದರು. ಅವರ ಕಾರ್ಯಗಳು ನನಗೂ ಪ್ರೇರಣೆಯಾಯಿತು. ಈಗ, ನನ್ನ ಬಳಿ ಇರುವ ಸ್ವಲ್ಪ ಸಂಪನ್ಮೂಲಗಳಿಂದಲೇ ನಾನು ಇತರೆ ವಿಧವೆಯರನ್ನು ಬೆಂಬಲಿಸುತ್ತಿದ್ದೇನೆ. ಒಟ್ಟಾಗಿ ನಿಂತಾಗ ನಾವು ಇನ್ನಷ್ಟು ಬಲಿಷ್ಠರಾಗಿದ್ದೇವೆ. ಈ ಎಲ್ಲದರ ನಡುವೆಯೂ, ನಾವು ನಮ್ಮ ಕುಟುಂಬಗಳಿಗೆ ಮತ್ತು ನಮ್ಮ ಗಂಡಂದಿರ ಸ್ಮರಣೆಗೆ ನಿಷ್ಠಾವಂತ ವ್ಯಕ್ತಿಯಾಗಿದ್ದೇವೆ. ಕೆಲವು ವಿಧವೆಯರು ಬೇಗ ಮರುವಿವಾಹವಾಗುವ ಸಂದರ್ಭಗಳಿದ್ದರೂ, ನಾವು ನಮ್ಮ ಮಕ್ಕಳನ್ನು ಬೆಳೆಸುವದಕ್ಕೂ, ನಮ್ಮ ಕುಟುಂಬಗಳನ್ನು ಏಕತೆಯಲ್ಲಿಡುವದಕ್ಕೂ ಆದ್ಯತೆ ನೀಡಲು ಶ್ರಮಿಸುತ್ತೇವೆ. ಇದು ಸುಲಭವಾದ ದಾರಿಯಲ್ಲ; ಆದರೆ ವಿಶ್ವಾಸ ಮತ್ತು ಸಮುದಾಯದೊಂದಿಗೆ, ಮುಂದುವರಿಯುವ ಶಕ್ತಿಯನ್ನು ನಾವು ಪಡೆದುಕೊಳ್ಳುತ್ತೇವೆ. ನಮ್ಮ ಭಾರ ಹೆಚ್ಚಾಗಿದೆ, ಆದರೆ

ಅದನ್ನು ಯೇಸುವಿನ ಪಾದಗಳ ಬಳಿಗೆ ಇಡುವುದನ್ನು ನಾವು ಕಲಿಯುತ್ತಿದ್ದೇವೆ — ಆತನ ವಾಗ್ದಾನದಲ್ಲಿ ವಿಶ್ರಾಂತಿಯನ್ನು ಕಂಡುಕೊಳ್ಳುತ್ತೇವೆ.

**ಪರಾರ್ಥ ಪ್ರಾರ್ಥನೆ : ನಾವು ಪ್ರಾರ್ಥಿಸೋಣ**: ಓ ದೇವರೇ, ನೀನೇ ಹೆಚ್ಚಾದ ಭಾರವಹಿಸುವವನು. ಜಗತ್ತಿನ ಎಲ್ಲ ಕೋಣೆಗಳಿಂದ ಬಂದಿರುವ ನಿನ್ನ ಮಕ್ಕಳಾಗಿ ನಾವು ನಿನ್ನ ಸನ್ನಿಧಿಯಲ್ಲಿ ನೆರೆದಿದ್ದೇವೆ. ವ್ಯವಸ್ಥಿತ ದಬ್ಬಾಳಿಕೆಯ ಭಾರವನ್ನು ಹೊತ್ತಿರುವ ಬಿಯಾಟ್ರಿಸ್ ಮತ್ತು ನಮ್ಮ ಎಲ್ಲಾ ಸಹೋದರ-ಸಹೋದರಿಯರೊಂದಿಗೆ ನಮ್ಮ ಧ್ವನಿಯನ್ನು ಸೇರಿಸಿ ನಿನ್ನೆಡೆಗೆ ಎತ್ತುತ್ತೇವೆ.

ಕರುಣಾಮಯನಾದ ದೇವರೇ, ನೀನು ನಮ್ಮನ್ನು ಕಾಣುವವನಾಗಿದ್ದಿಯೆಂಬುದನ್ನು ನಾವು ತಿಳಿದಿದ್ದೇವೆ. ಅನೇಕರು ಎದುರಿಸುತ್ತಿರುವ ಭೇದಭಾವವನ್ನು — ಅಂದರೆ ಮಹಿಳೆಯರನ್ನು ವಿಧವೆಯರನ್ನು, ಅಲ್ಪಸಂಖ್ಯಾತರನ್ನು, ಬಡವರನ್ನು — ನೀನು ದೃಷ್ಟಿಸಿ ನೋಡುವವನಾಗಿದ್ದೀ. ಕೆಲವರು ಕಾರ್ಖಾನೆಗಳಲ್ಲಿ, ಹೊಲಗಳಲ್ಲಿ, ಮನೆಗಳಲ್ಲಿ ದುಡಿದು ತಮ್ಮ ಬೆನ್ನೆಲುಬನ್ನು ಮುರಿದುಕೊಳ್ಳುತ್ತಿದ್ದಾರೆ; ಇನ್ನು ಕೆಲವರಿಗೆ ತಮ್ಮ ಕುಟುಂಬವನ್ನು ಪೋಷಿಸಲು ಉದ್ಯೋಗವೇ ಸಿಕ್ಕಿದೆ ಪರದಾಡುವಂತಾಗಿದೆ. ಕೃಪಾಮಯನಾದ ಕರ್ತನೇ, ನಮ್ಮೆಲ್ಲರ ಪರವಾಗಿ ಮಧ್ಯಸ್ಥಿಕೆಯನ್ನು ವಹಿಸಿ ಸಂಕಷ್ಟಕರ ಪರಿಸ್ಥಿತಿಗಳ ನಡುವೆಯೂ ನಿಷ್ಠೆಯಿಂದಿರುವ ಎಲ್ಲರ ಸ್ಥೈರ್ಯ ಮತ್ತು ಸಂಪನ್ಮೂಲಶೀಲತೆಗೆ ನಾವು ನಿನಗೆ ಕೃತಜ್ಞತೆ ಸಲ್ಲಿಸುತ್ತೇವೆ. ಅವರ ಉದಾಹರಣೆಯಿಂದ ನಮ್ಮನ್ನು ಪ್ರೇರೇಪಿಸಿ, ಉತ್ತಮ ಲೋಕವನ್ನು ಕಟ್ಟುವದಕ್ಕೆ ನಮ್ಮನ್ನು ನಡೆಸು.

ಸರ್ವಶಕ್ತನಾದ ದೇವರೇ, ನೀನು ಹಿಂದೆ ನಿನ್ನ ಜನರಿಗಾಗಿ ಕೈಗಳನ್ನು ಚಾಚಿ ಕೆಂಪು ಸಮುದ್ರವನ್ನು ವಿಭಜಿಸಿದ್ದೀ. ಇಂದೂ ಜಗತ್ತಿನ ಅನೇಕರನ್ನು ಮುಳುಗಿಸುತ್ತಿರುವ ಅನ್ಯಾಯದ ಸಮುದ್ರವನ್ನು ವಿಭಜಿಸು. ಎಲ್ಲೆಡೆ ಇರುವ ನಾಯಕರ ಹೃದಯದಲ್ಲಿ ನೀನು ಮಾತಾಡಿ, ಅವರು ನ್ಯಾಯ ಮತ್ತು ಕರುಣೆಯೊಂದಿಗೆ ಆಡಳಿತ ನಡೆಸುವಂತೆ ಮಾಡು. ಅಂಚಿಗೆ ತಳ್ಳಲ್ಪಟ್ಟವರ ಬಗ್ಗೆ ಸಮುದಾಯಗಳ ಮನೋಭಾವಗಳು ಮತ್ತು ಕಾರ್ಯಗಳು ಬದಲಾಗುವಂತೆ ಮಾಡು.

ಪ್ರಿಯ ಯೇಸುಸ್ವಾಮಿಯೇ, ನೀನು ದಬ್ಬಾಳಿಕೆಗೆ ಒಳಗಾದವರನ್ನು ಸ್ವೀಕರಿಸಿ, ಕುಗ್ಗಿಹೋದವರನ್ನು ಎತ್ತಿ ಹಿಡಿಯುವವನಾಗಿದ್ದೀ. ಇಂದೂ ದಬ್ಬಾಳಿಕೆಯ ವ್ಯವಸ್ಥೆಗಳ ಅಡಿಯಲ್ಲಿ ನೋವು ಅನುಭವಿಸುವ ಎಲ್ಲರಿಗಾಗಿ ಅದೇ ಕಾರ್ಯವನ್ನು ಮಾಡು. ಭಾರಗಳು ಅತಿಯಾದಂತೆ ತೋರುವಾಗಲೂ, ನಿನ್ನಲ್ಲಿ ನಂಬಿಕೆ ಇಟ್ಟು ಮುಂದುವರಿಯುವ ಶಕ್ತಿಯನ್ನು ನಮಗೆ ಕೊಡು.

ಪವಿತ್ರಾತ್ಮನೇ, ನಮ್ಮನ್ನು ಹೊಸದಾಗಿ ರೂಪಿಸು. ಜಗತ್ತಿನಾದ್ಯಂತ ಇರುವ ನಮ್ಮ ಸಮುದಾಯಗಳಲ್ಲಿ ನಿನ್ನ ಶಕ್ತಿ ಹರಿದುಬರಲಿ. ಇತರರಿಗೆ ಆಶೀರ್ವಾದವಾಗುವಂತೆ ನಮ್ಮನ್ನು ಉಪಯೋಗಿಸು. ತಮ್ಮದೇ ಹೋರಾಟಗಳಿಂದ ಇತರರನ್ನು ಆಶೀರ್ವದಿಸುವ ಎಲ್ಲರಿಂದ ನಮ್ಮನ್ನು ಪ್ರೇರೇಪಿಸು.

ನಮ್ಮ ಅಳಲುಗಳನ್ನು ಕೇಳಿ, ನಮ್ಮ ಭಾರಗಳನ್ನು ಹೊರುವ ಪ್ರೀತಿಯ ದೇವರೇ, ನಿನಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ. ನಿನ್ನ ಅಚಲ ಪ್ರೀತಿ ಮತ್ತು ಪರಿಸ್ಥಿತಿಗಳನ್ನು ಪರಿವರ್ತಿಸುವ ನಿನ್ನ ಮಹಾಶಕ್ತಿಯಲ್ಲಿ ನಾವು ನಂಬಿಕೆ ಇಡುತ್ತೇವೆ.

ಆಮೆನ್.

ಥೀಮ್ ಗೀತೆಯ ಪಲ್ಲವಿಯನ್ನು ಪುನರಾವರ್ತಿಸಿರಿ:

“ನನ್ನ ಬಳಿಗೆ ಬನ್ನಿರಿ” (Come Unto Me)

**ಜಾಟೋ ಅವರ ಕಥೆ: ಧಾರ್ಮಿಕ ಹಿಂಸೆಯ ಭಾರ**

ನನ್ನ ಹೆಸರು ಜಾಟೋ. ನಾನು ಉತ್ತರ ನೈಜೀರಿಯಾದಲ್ಲಿ ವಾಸಿಸುವ ಒಬ್ಬ ಕ್ರೈಸ್ತ ತಾಯಿ. ಪ್ರತಿದಿನ ನನ್ನ 14 ವರ್ಷದ ಮಗಳು ಅಮೀನಾಳನ್ನು ಶಾಲೆಗೆ ಕಳುಹಿಸುವಾಗ, ನನ್ನ ಹೃದಯವು ಆತಂಕದಿಂದ ಬಿಗಿದುಕೊಳ್ಳುತ್ತದೆ. ಏಕೆಂದರೆ, ಅಮೀನಾ, ಡಾಪ್ಚಿ

ಎಂಬ ಪಟ್ಟಣದಲ್ಲಿ ತನ್ನ ಶಾಲೆಯಿಂದ ಅಪಹರಣಗೊಂಡ ಲಿ

ಲೆಯಾ ಶರಿಬು ಇದ್ದ ವಯಸ್ಸಿನಲ್ಲೇ ಇದ್ದಾಳೆ — ಆ ಸ್ಥಳ ನಮ್ಮ ಮನೆಯಿಂದ ಕೆಲವೇ ಗಂಟೆಗಳ ದೂರದಲ್ಲಿದೆ.

ಲೆಯಾದ ಕಥೆ ನನ್ನನ್ನು ಹಿಂಬಾಲಿಸುತ್ತಲೇ ಇರುತ್ತದೆ. ಕ್ರಿಸ್ತನ ಮೇಲಣ ತನ್ನ ವಿಶ್ವಾಸವನ್ನು ತ್ಯಜಿಸಲು ನಿರಾಕರಿಸಿದ, ದೃಢ ನಂಬಿಕೆಯುಳ್ಳ ಒಬ್ಬ ಯುವತಿ. ಬೋಕೋ ಹರಾಂ ಅವಳನ್ನು ಅಪಹರಿಸಿ ಈಗ ಎಂಟು ವರ್ಷಗಳು ಕಳೆದಿವೆ; ಆದರೂ ಅವಳು ಇನ್ನೂ ಬಂಧನದಲ್ಲೇ ಇದ್ದಾಳೆ. ಪ್ರತಿಬಾರಿಯೂ ನಾನು ಅಮೀನಾಳನ್ನು ನೋಡಿದಾಗ, "ನನ್ನ ಮಗಳೇ ಹಾಗೆ ಆಗಿದ್ದರೆ?" ಎಂಬ ಪ್ರಶ್ನೆ ನನ್ನ ಮನಸ್ಸನ್ನು ಕಾಡುತ್ತದೆ.

ಧಾರ್ಮಿಕ ಹಿಂಸೆಯ ನೆರಳಿನಲ್ಲಿ ಬದುಕುವುದು ಸುಲಭವಲ್ಲ. ಕೆಲವು ಪ್ರದೇಶಗಳಲ್ಲಿ ಕ್ರೈಸ್ತರು ಕೇವಲ ತಮ್ಮ ವಿಶ್ವಾಸದ ಕಾರಣಕ್ಕೆ ಹತ್ಯೆಯಾಗುತ್ತಾರೆ. ಆದರೂ ದೇವರ ಕೃಪೆಯಿಂದ, ನಾವು ನಮ್ಮ ಮುಸ್ಲಿಂ ನೆರೆಹೊರೆಯವರೊಂದಿಗೆ ವಾಸಮಾಡಿಕೊಂಡಿದ್ದೇವೆ. ಎಲ್ಲೆಡೆ ಇದು ಒಂದೇ ರೀತಿ ಅಲ್ಲ — ದಕ್ಷಿಣ ಪಶ್ಚಿಮದ ಯೊರುಬಾಲ್ಯಾಂಡ್‌ನಲ್ಲಿ, ಕ್ರೈಸ್ತರು ಮತ್ತು ಮುಸ್ಲಿಮರು ಕುಟುಂಬದವರಂತೆ ಒಟ್ಟಾಗಿ ಬದುಕುತ್ತಾರೆ. ಹಾಗೆಯೇ, ಜಗತ್ತಿನ ಕೆಲವು ಭಾಗಗಳಲ್ಲಿ ಕ್ರೈಸ್ತರೆ ಇತರ ಧಾರ್ಮಿಕ ಸಮುದಾಯಗಳನ್ನು ಅವರ ವಿಶ್ವಾಸದ ಕಾರಣಕ್ಕೆ ಹಿಂಸಿಸುವವರಾಗಿದ್ದಾರೆ ಎಂಬುದನ್ನೂ ನಾನು ಅರಿತಿದ್ದೇನೆ.

ಧಾರ್ಮಿಕ ಹಿಂಸೆಯ ಎದುರಿನಲ್ಲಿ ನನ್ನ ವಿಶ್ವಾಸ ನನಗೆ ಏನು ಮಾಡಲು ಕರೆ ನೀಡುತ್ತದೆ ಎಂಬುದನ್ನು ನಾನು ಅನೇಕ ಬಾರಿ ಆಲೋಚಿಸುತ್ತೇನೆ. ಯೇಸು ನಮಗೆ ನಮ್ಮ ಶತ್ರುಗಳನ್ನು ಪ್ರೀತಿಸಬೇಕು, ನಮ್ಮನ್ನು ಹಿಂಸಿಸುವವರಿಗಾಗಿ ಪ್ರಾರ್ಥಿಸಬೇಕು ಎಂದು ಬೋಧಿಸುತ್ತಾನೆ. ಇದು ಸುಲಭವಲ್ಲ — ನಿಜವಾಗಿಯೂ ಸುಲಭವಲ್ಲ. ಕೆಲವು ದಿನಗಳಲ್ಲಿ, ಮತ್ತೊಂದು ದಾಳಿ, ಮತ್ತೊಂದು ಅಪಹರಣದ ಸುದ್ದಿ ಕೇಳಿದಾಗ, ನನ್ನ ಹೃದಯದಲ್ಲಿ ಕೋಪ ಉಕ್ಕಿಬರುತ್ತದೆ. ಆದರೆ ಆಗ ನಾನು ನೆನಪಿಸಿಕೊಳ್ಳುತ್ತೇನೆ — ಕ್ರೈಸ್ತನಾಗಿರುವುದೆಂದರೆ ಕ್ರಿಸ್ತನಂತೆ ಇರುವುದೇ.

ಈ ಸಂಘರ್ಷಗಳು ನಿನ್ನೆ ಆರಂಭವಾದವುಗಳಲ್ಲ. ಯೇಸುವಿನ ಕಾಲದಲ್ಲಿಯೂ ವಿಭಿನ್ನ ಗುಂಪುಗಳ ನಡುವೆ ಸಂಘರ್ಷಗಳಿದ್ದವು. ಆದರೆ ಯೇಸು ನಮಗೆ ವಿಭಿನ್ನ ದಾರಿಯನ್ನು ತೋರಿಸಿದನು. ಜೀವದ ಮೌಲ್ಯವನ್ನು ಗೌರವಿಸದಂತೆ ಕಾಣುವವರಿಗೂ ಸಹ ಪ್ರೀತಿಯನ್ನು ತೋರಿಸುವಂತೆ ಆತ ನಮ್ಮನ್ನು ಕರೆಯುತ್ತಾನೆ. ಮೊದಲ ನೋಟಕ್ಕೆ ಇದು ಭಾರವಾದ ನೊಗವೆಂದು ತೋರುತ್ತದೆ; ಆದರೆ ಯೇಸು ಹೇಳುತ್ತಾನೆ — "ನನ್ನ ನೊಗವು ಸುಲಭವಾಗಿದೆ, ನನ್ನ ಭಾರವು ಹಗುರವಾಗಿದೆ."

ಆ ಹಗುರತೆಯನ್ನು ನಾವು ಹೇಗೆ ಪಡೆಯುತ್ತೇವೆ? ಅದು ದೇವರ ಕೃಪೆಯ ಮೂಲಕ ಮಾತ್ರ. ನಮ್ಮನ್ನು ಹಾನಿಗೊಳಿಸಲು ಬಯಸುವವರನ್ನೂ ಸೇರಿಸಿ, ನಮ್ಮ ನೆರೆಹೊರೆಯವರನ್ನು ಪ್ರೀತಿಸುವ ನೊಗವನ್ನು ನಾವು ಹೊರುತ್ತೇವೆ. ಇದು ಸುಲಭವಲ್ಲ, ಆದರೆ ಪ್ರತಿಯೊಂದು ಸವಾಲಿನಲ್ಲೂ ದೇವರ ಕೃಪೆಯೇ ನಮ್ಮನ್ನು ಸಾಗಿಸುತ್ತದೆ.

ಪ್ರತಿದಿನ ಬೆಳಿಗ್ಗೆ ಅಮೀನಾ ಶಾಲೆಗೆ ಹೋಗುವ ಮೊದಲು ಅವಳೊಂದಿಗೆ ಪ್ರಾರ್ಥಿಸುವಾಗ, ನಾನು ಯೇಸುವಿನ ಮಾತುಗಳನ್ನು ಅವಳಿಗೆ ನೆನಪಿಸುತ್ತೇನೆ:

"ಈ ಲೋಕದಲ್ಲಿ ನಿಮಗೆ ಸಂಕಟವಿರುತ್ತದೆ; ಆದರೆ ಧೈರ್ಯವಿರಲಿ — ನಾನು ಲೋಕವನ್ನು ಜಯಿಸಿದ್ದೇನೆ."

ನಮ್ಮ ಶಕ್ತಿ ಸುಲಭವಾದ ಜೀವನದ ನಿರೀಕ್ಷೆಯಿಂದ ಬರುತ್ತಿಲ್ಲ. ಬದಲಾಗಿ, ಪ್ರತಿಯೊಂದು ಸಂಕಷ್ಟದಲ್ಲೂ ಕ್ರಿಸ್ತನು ನಮ್ಮ ಜೊತೆ ನಡೆಯುತ್ತಾನೆ ಎಂಬ ಅರಿವಿನಲ್ಲಿ ನಮ್ಮ ಶಕ್ತಿ ಬೇರುಬಿಟ್ಟಿದೆ. ಹಿಂಸೆಯ ಎದುರಿನಲ್ಲಿ ನಾವು ಕೇವಲ ರಕ್ಷಣೆಯನ್ನು ಕಾಯುವುದಿಲ್ಲ; ಪ್ರೀತಿ ಮತ್ತು ಕ್ಷಮೆಯ ಪ್ರತಿಯೊಂದು ಕೃತ್ಯವೂ ನಮ್ಮ ಜೀವನಗಳಲ್ಲಿ ಕ್ರಿಸ್ತನ ಶಾಶ್ವತ ಶಕ್ತಿಗೆ ಸಾಕ್ಷಿಯಾಗಿದೆ ಎಂಬುದನ್ನು ತಿಳಿದು, ನಮ್ಮ ವಿಶ್ವಾಸವನ್ನು ಸಕ್ರಿಯವಾಗಿ ಕಾರ್ಯರೂಪಕ್ಕೆ ತರುತ್ತೇವೆ.

ಲೆಯಾದ ಕಥೆ ನಮ್ಮ ವಿಶ್ವಾಸದ ಬೆಲೆಯನ್ನು ನಮಗೆ ನೆನಪಿಸುತ್ತದೆ. ಆದರೆ ಅದೇ ಕಥೆ ಅದರ ಶಕ್ತಿಯನ್ನೂ ತೋರಿಸುತ್ತದೆ. ಡಮಟೂರು ಎಂಬ ಸ್ಥಳದಲ್ಲಿ, ಒಂದು ಸಣ್ಣ ಕ್ರೈಸ್ತ ಸಮುದಾಯವು ಇನ್ನೂ ಲೆಯಾ ಮರಳಿ ಬರುವಂತೆ ಅನೇಕರು ಪ್ರಾರ್ಥಿಸಲು ಸೇರುತ್ತಲೇ ಇದ್ದಾರೆ. ಅವರ ನಿರೀಕ್ಷೆ, ಅವರ ನಿರಂತರ ವಿಶ್ವಾಸ, ನನಗೆ ಪ್ರೇರಣೆಯಾಗುತ್ತದೆ — ನಾನು ನಂಬಿಕೆಯನ್ನು ಉಳಿಸಿಕೊಳ್ಳಲು, ಪ್ರೀತಿಯನ್ನು ಮುಂದುವರಿಸಲು, ಮುಸ್ಲಿಮರು ಮತ್ತು ಕ್ರೈಸ್ತರು ಎಲ್ಲರ ಜೊತೆಯೂ ಸಹವಾಸ ಮಾಡಲು ಆತ್ಮವಿಶ್ವಾಸವನ್ನು ತೆಗೆದುಕೊಂಡಿದ್ದೇನೆ.

ಪ್ರತಿದಿನ ಅಮೀನಾ ಶಾಲೆಗೆ ಹೊರಟುಹೋಗುವಾಗ, ನಾನು ಅವಳ ಸುರಕ್ಷತೆಗಾಗಿ ಮಾತ್ರವಲ್ಲ, ಅವಳ ಹೃದಯಕ್ಕಾಗಿಯೂ ಪ್ರಾರ್ಥಿಸುತ್ತೇನೆ. ಲೆಯಾದಂತೆ ಅವಳೂ ತನ್ನ ವಿಶ್ವಾಸದಲ್ಲಿ ದೃಢವಾಗಿ ನಿಲ್ಲುವ ಶಕ್ತಿಯನ್ನು ಹೊಂದಿರಲಿ ಎಂದು ಕೇಳಿಕೊಳ್ಳುತ್ತೇನೆ. ಜೊತೆಗೆ, ಅವಳು ಭೇಟಿಯಾಗುವ ಪ್ರತಿಯೊಬ್ಬರಲ್ಲೂ — ಅವರ ಧರ್ಮವೇನಾಗಿರಲಿ — ದೇವರ ಪ್ರತಿರೂಪವನ್ನು ನೋಡುವ ಪ್ರೀತಿಯನ್ನೂ ಹೊಂದಿರಲಿ ಎಂದು ಪ್ರಾರ್ಥಿಸುತ್ತೇನೆ.

ನಾವು ದೇವರಲ್ಲಿ ವಿಶ್ರಾಂತಿಯನ್ನು ಕಂಡುಕೊಳ್ಳುವುದು ಹೀಗೆ — ದ್ವೇಷ ಅಥವಾ ಅಸಹಿಷ್ಣುತೆಯನ್ನು ಪೋಷಿಸುವ ಮೂಲಕವಲ್ಲ; ಬದಲಾಗಿ, ಹಿಂಸೆಯ ನಡುವೆಯೂ ಕ್ರಿಸ್ತನ ಪ್ರೀತಿಯನ್ನು  ನಮ್ಮ ಮೂಲಕ ಹರಿದುಬರಲು ಅವಕಾಶ ನೀಡುವುದರಿಂದ ಮಾತ್ರ. ಇದು ಪ್ರತಿದಿನದ ಆಯ್ಕೆ, ಪ್ರತಿದಿನದ ಸಮರ್ಪಣೆ. ಆದರೆ ಈ ಆಯ್ಕೆಯನ್ನು ಮಾಡುವಾಗಲೇ, ನಮ್ಮ ಭಾರಗಳು ನಿಜಕ್ಕೂ ಹಗುರವಾಗುತ್ತವೆ; ಮತ್ತು ದೇವರಲ್ಲೇ ನಾವು ವಿಶ್ರಾಂತಿಯನ್ನು ಕಂಡುಕೊಳ್ಳುತ್ತೇವೆ.

ಪರಾರ್ಥ ಪ್ರಾರ್ಥನೆ

ನಾವು ಪ್ರಾರ್ಥಿಸೋಣ:

ಹಿಂಸೆಗೆ ಒಳಗಾದವರ ದೇವರೇ, ನಿಷ್ಠರ ರಕ್ಷಕನೇ, ಲೆಯಾದ ಕಥೆಯಿಂದ ಭಾರವಾದ ಹೃದಯಗಳೊಂದಿಗೆ ಮತ್ತು ಪ್ರತಿದಿನ ತಮ್ಮ ಮಕ್ಕಳನ್ನು ಅಪಾಯದ ನೆರಳಿನಲ್ಲಿ ಶಾಲೆಗೆ ಕಳುಹಿಸುವ ಜಾಟೋ ಅವರಂತಹ ತಾಯಂದಿರ ಭಯಗಳೊಂದಿಗೆ ನಾವು ನಿನ್ನ ಸನ್ನಿಧಿಗೆ ಬರುತ್ತೇವೆ.

ಕರ್ತನಾದ ಯೇಸುವೇ, ನೀನು ಹಿಂಸೆಯನ್ನು ಎದುರಿಸಿ ನಿನ್ನ ವಿಶ್ವಾಸದಲ್ಲಿ ದೃಢವಾಗಿ ನಿಂತವನು ನೀನು. ಲೆಯಾ ಶರಿಬು ಮತ್ತು ತಮ್ಮ ನಂಬಿಕೆಯ ಕಾರಣಕ್ಕೆ ದುಃಖ ಅನುಭವಿಸುವ ಎಲ್ಲರನ್ನು ನಿನ್ನ ಮುಂದೆ ಎತ್ತಿ ಹಿಡಿಯುತ್ತೇವೆ. ಅವರ ಅತಿ ಕತ್ತಲೆಯ ಘಳಿಗೆಯಲ್ಲಿ ಅವರಿಗೆ ಶಕ್ತಿ ಮತ್ತು ಸಾಂತ್ವನವನ್ನು ದಯಪಾಲಿಸು; ಸಂಕಷ್ಟದ ಎದುರಿನಲ್ಲಿ ದೃಢವಾಗಿ ನಿಲ್ಲಲು ನಮ್ಮನ್ನೂ ಪ್ರೇರೇಪಿಸು.

ಪವಿತ್ರಾತ್ಮನೇ, ಹಿಂಸೆಯಿಂದ ಸ್ಥಳಚ್ಯುತರಾಗಿ, ತಮ್ಮ ಮನೆಗಳನ್ನು ತೊರೆದು ಅನ್ಯಭೂಮಿಗಳಲ್ಲಿ ಶರಣಾರ್ಥಿಗಳಾಗಿರುವವರಿಗಾಗಿ ನಾವು ಮೊರೆಯಿಡುತ್ತೇವೆ. ನಿನ್ನ ರೆಕ್ಕೆಗಳ ಕೆಳಗೆ ಎಲ್ಲ ಸ್ಥಳಚ್ಯುತರನ್ನೂ ಆಶ್ರಯಿಸು; ಅವರ ಅಗತ್ಯಗಳನ್ನು ಪೂರೈಸಿ, ಅವರನ್ನು ಸುರಕ್ಷತೆ ಮತ್ತು ಹೊಸ ಆರಂಭಗಳತ್ತ ನಡೆಸು.

ನ್ಯಾಯದ ದೇವರೇ, ನಮ್ಮ ಸಮಾಜದ ಬಟ್ಟೆಯನ್ನು ಚೂರುಚೂರು ಮಾಡುವ ಪಾಪಗಳನ್ನು ನಾವು ಅಂಗೀಕರಿಸುತ್ತೇವೆ — ಭಯವನ್ನು ಹುಟ್ಟಿಸುವ ಅಸಹಿಷ್ಣುತೆ, ಹಿಂಸೆಯನ್ನು ಉರಿಗೊಳಿಸುವ ದ್ವೇಷ, ಅನ್ಯಾಯವನ್ನು ಮುಂದುವರಿಯಲು ಬಿಡುವ ನಿರ್ಲಕ್ಷ್ಯ. ನಮ್ಮನ್ನು ಬಂಧಿಸುವ ಮತ್ತು ನಮ್ಮ ನೆರೆಹೊರೆಯವರಿಂದ ಬೇರ್ಪಡಿಸುವ ಪ್ರತಿಯೊಂದು ಸರಪಳಿಯನ್ನು ಮುರಿಯಬೇಕೆಂದು ಬೇಡಕತ್ತೇವೆ.

ಭಯ ಮತ್ತು ಹಿಂಸೆಯನ್ನು ಹರಡುವ ಅತಿರೇಖವಾದದ ವಿರುದ್ಧ ನಾವು ಮೊರೆಯಿಡುತ್ತೇವೆ. ಅದರಲ್ಲಿ ತೊಡಗಿರುವವರ ಹೃದಯಗಳನ್ನು ಸ್ಪರ್ಶಿಸಿ, ಮಾನವ ಜೀವದ ಮೌಲ್ಯವನ್ನು ಮತ್ತು ಶಾಂತಿಯ ಮಾರ್ಗವನ್ನು ಅವರಿಗೆ ತೋರಿಸು. ಜಾಟೋ ಅವರಂತಹವರು ತಮ್ಮ ಪ್ರಿಯರನ್ನು ಕಳೆದುಕೊಳ್ಳುವ ಭಯದಲ್ಲಿ ಬದುಕುತ್ತಿರುವಾಗ, ಅವರಿಗೆ ಸಾಂತ್ವನವನ್ನು ನೀಡು. ಅಪರಾಧಿಗಳ ಹೃದಯಗಳನ್ನು ಬದಲಿಸಿ, ಸಮಾಧಾನದ ಕಡೆಗೆ ಅವರನ್ನು ನಡೆಸು.

ನಮ್ಮ ಭಾರವನ್ನು ಹೊರುವ ಯೇಸುವೇ, ಪ್ರೀತಿ ಮತ್ತು ಕ್ಷಮೆಯ ನಿನ್ನ ನೊಗವನ್ನು ಹೊರುವದಕ್ಕೆ ನಮಗೆ ಸಹಾಯಮಾಡು. ಕೆಟ್ಟದನ್ನು ಪ್ರತಿರೋಧಿಸಲು, ಪ್ರೀತಿಯನ್ನು ಆಯ್ಕೆಮಾಡಲು, ಸಕಾರಾತ್ಮಕ ಬದಲಾವಣೆಯ ಸಾಧಕರಾಗಲು ನಮಗೆ ಶಕ್ತಿಯನ್ನು ನೀಡು. ನಮ್ಮ ಮನಸ್ಸುಗಳನ್ನೂ ಹೃದಯಗಳನ್ನೂ ನವೀಕರಿಸಿ, ನೀತಿಯಲ್ಲಿ ನಮ್ಮನ್ನು ನಡೆಸು — ನಮ್ಮನ್ನು ಹಿಂಸಿಸುವವರನ್ನೂ ಸೇರಿಸಿ, ಎಲ್ಲರಿಗೂ ಆಶೀರ್ವಾದವಾಗುವಂತೆ ನಿನ್ನನ್ನು ಗೌರವಿಸಲು ನಮಗೆ ಸಹಾಯಮಾಡು. ಸಂಘರ್ಷ ಮತ್ತು ದ್ವೇಷವನ್ನು ಪರಿವರ್ತಿಸುವ ನಿನ್ನ ಅಚಲ ಪ್ರೀತಿ ಮತ್ತು ಶಕ್ತಿಯಲ್ಲಿ ನಾವು ನಂಬಿಕೆ ಇಡುತ್ತೇವೆ. ಆಮೆನ್.

ಥೀಮ್ ಗೀತೆಯ ಪಲ್ಲವಿಯನ್ನು ಪುನರಾವರ್ತಿಸಿರಿ:

“ನನ್ನ ಬಳಿಗೆ ಬನ್ನಿರಿ” (Come Unto Me)

ಬ್ಲೆಸಿಂಗ್ ಅವರ ಕಥೆ: ಬಡತನ ಮತ್ತು ನಿರಾಶೆಯ ಭಾರ

ನನ್ನ ಹೆಸರು ಬ್ಲೆಸಿಂಗ್. ನಾನು ನನ್ನ ಜೀವನ ಪರ್ಯಂತ ಲಾಗೋಸ್‌ನಲ್ಲಿಯೇ ವಾಸವಾಗಿದ್ದೇನು. ವರ್ಷಗಳ ಹಿಂದೆ ನೈಜೀರಿಯಾ ಬದಲಾಗುವುದನ್ನು ನಾನು ಕಂಡಿದ್ದೇನೆ — ಆದರೆ ನಾವು ನಿರೀಕ್ಷಿಸಿದ್ದ ರೀತಿಯಲ್ಲಿ ಅಲ್ಲ. ಪ್ರಗತಿಯ ಕನಸು ಕಂಡಿದ್ದೆವು; ನಮ್ಮ ಮಕ್ಕಳಿಗೆ ಉತ್ತಮ ಭವಿಷ್ಯವನ್ನು ಆಶಿಸಿದ್ದೆವು. ಆದರೆ ಅದರ ಬದಲು, ನಮ್ಮ ರಾಷ್ಟ್ರವು ಬಡತನ ಮತ್ತು ನಿರಾಶೆಯೊಳಗೆ ಇನ್ನಷ್ಟು ಆಳವಾಗಿ ಮುಳುಗುತ್ತಿರುವುದನ್ನು ನೋಡುತ್ತಿದ್ದೇವೆ.

ಪ್ರತಿದಿನವೂ ಇದರ ಭಾರವು ನಮ್ಮ ಮನಸ್ಸುಗಳ ಮೇಲೆ, ನಮ್ಮ ಆತ್ಮಗಳ ಮೇಲೆ ಹೇಗೆ ಬೀಳುತ್ತದೆ ಎಂಬುದನ್ನು ನಾನು ಸಾಕ್ಷಿಕರಿಸುತ್ತಿದ್ದೇನೆ. ನಾವು ಎಲ್ಲರೂ ನಿರಾಶೆಯ ಒಂದು ಚಕ್ರದಲ್ಲಿ ಸಿಕ್ಕಿಬಿದ್ದವರಂತೆ ಆಗಿದ್ದೇವೆ. ಅನೇಕ ಬಾರಿ ನಿರಾಶರಾಗಿರುವುದರಿಂದ, ಒಳ್ಳೆಯದು ನಮ್ಮ ಬಳಿಗೆ ಬಂದರೂ ಅದನ್ನು ನಂಬಲು ನಾವು ಭಯಪಡುವ ಸ್ಥಿತಿಗೆ ತಲುಪಿದ್ದೇವೆ. ಇದು ಇಂದಿನ ನೈಜೀರಿಯಾ — ಪರಿಸ್ಥಿತಿಗಳು ಉತ್ತಮವಾಗಬಹುದು ಎಂಬ ನಂಬಿಕೆಯನ್ನು ನಾವು ಕಳೆದುಕೊಂಡಂತಾಗಿದೆ.

ಸರ್ಕಾರವು ನಮ್ಮ ಬಗ್ಗೆ ಕಾಳಜಿ ತೋರಿಸುವುದಕ್ಕಿಂತ ತನ್ನದೇ ವಿಚಾರಗಳಲ್ಲಿ ತೊಡಗಿರುವಂತೆ ಕಾಣುತ್ತದೆ. ಹೆಚ್ಚಿನ ಜನರ ಸಂಬಳವು ಬದುಕಲು ಸಾಕಾಗುವುದಿಲ್ಲ; ಆದರೆ ಕೆಲವೇ ಮಂದಿ ಅಪಾರ ಸಂಪತ್ತನ್ನು ಗಳಿಸುತ್ತಿದ್ದಾರೆ. ಅಕ್ಕಿಯ ಚೀಲ — ನಮ್ಮ ದಿನನಿತ್ಯದ ಆಹಾರ — ಇಂದು ಅನೇಕ ಕುಟುಂಬಗಳಿಗೆ ಐಶಾರಾಮಾಗಿ ಮಾರ್ಪಟ್ಟಿದೆ. ಪ್ರತಿಭಾಶಾಲಿಗಳಾದ ನಮ್ಮ ಯುವಜನರು ಉದ್ಯೋಗವನ್ನು ಕಂಡುಕೊಳ್ಳಲಾಗದೆ ಹತಾಶರಾಗುತ್ತಿದ್ದಾರೆ. ಕೆಲವರು ನಿರಾಶೆಯಲ್ಲಿ ಮುಳುಗುತ್ತಿದ್ದಾರೆ; ಅನೇಕರು ಆತ್ಮಹತ್ಯೆಯ ಕಡೆಗೆ ತಿರುಗುತ್ತಿದ್ದಾರೆ. ಇನ್ನೂ ಕೆಲವರು ಅಪಹರಣೆ, ದರೋಡೆ, ದಂಡಾಯತನ ಅಥವಾ ವೇಶ್ಯಾವೃತ್ತಿಯಂತಹ ಅಪರಾಧಗಳಿಗೆ ನಿರಾಶೆಯಿಂದಲೇ ಇಳಿಯುತ್ತಿದ್ದಾರೆ.

ಇದು ಒಂದು ದುಷ್ಟಚಕ್ರ. ಬಡತನವು ನಮ್ಮ ಮಾನಸಿಕ ಆರೋಗ್ಯವನ್ನು ಹಾನಿಗೊಳಿಸುತ್ತದೆ; ಮತ್ತು ಹಾನಿಗೊಳಗಾದ ಮನಸ್ಸುಗಳು ಬಡತನದಿಂದ ಹೊರಬರಲು ಅಸಾಧ್ಯವಾಗುತ್ತದೆ. ಸಂಪನ್ಮೂಲಗಳಲ್ಲಿ ಸಿರಿತನ ನಮ್ಮ ದೇಶ, ಆದರೆ ನಾಯಕತ್ವ ಮತ್ತು ನಿರೀಕ್ಷೆಯಲ್ಲಿ ಬಡತನ ತಲೆದೋರಿದೆ.

ಆದರೂ, ಈ ನಿರಾಶೆಯ ನಡುವೆಯೂ ನಾನು ಬೆಳಕಿನ ಕಿರಣಗಳನ್ನು ಕಾಣುತ್ತೇನೆ. ನನ್ನ ನೆರೆಯವರಾದ ಗ್ರೇಸ್ ಅವರನ್ನು ನಾನು ನೆನಪಿಸಿಕೊಳ್ಳುತ್ತೇನೆ. ಒಂದೇ ವರ್ಷದಲ್ಲಿ ಅವಳು ತನ್ನ ಉದ್ಯೋಗವನ್ನೂ ಗಂಡನನ್ನೂ ಕಳೆದುಕೊಂಡಳು. ಎಲ್ಲವನ್ನೂ ತ್ಯಜಿಸಲು ಅವಳಿಗೆ ಸಾಕಷ್ಟು ಕಾರಣಗಳಿದ್ದವು; ಆದರೆ ಅವಳು ಕೈಬಿಡಲಿಲ್ಲ. ಬದಲಾಗಿ, ಮನೆಯಲ್ಲೇ ತಯಾರಿಸುವ ಸಾಬೂನುಗಳನ್ನು ಮಾರುವ ಒಂದು ಸಣ್ಣ ವ್ಯಾಪಾರವನ್ನು ಅವಳು ಆರಂಭಿಸಿದಳು. ಅದು ದೊಡ್ಡ ಆದಾಯವಲ್ಲದಿದ್ದರೂ, ಅವಳ ಮನೆಗೆ ಆಹಾರವನ್ನು ಒದಗಿಸಿ, ಅವಳ ಮಕ್ಕಳನ್ನು ಶಾಲೆಯಲ್ಲಿ ಉಳಿಸಿಕೊಳ್ಳಲು ಸಹಾಯ ಮಾಡುತ್ತಿದೆ. ಗ್ರೇಸ್ ನನಗೆ ಆಗಾಗ್ಗೆ ಹೇಳುತ್ತಾಳೆ: “ಬ್ಲೆಸಿಂಗ್, ನಾವು ಕೇವಲ ಬದುಕನ್ನು ತಡೆದುಕೊಳ್ಳುತ್ತಿಲ್ಲ; ವಿಶ್ವಾಸದಿಂದ ಬದುಕುತ್ತಿದ್ದೇವೆ.” ಅವಳ ಮಾತುಗಳು ಬೈಬಲ್‌ನ ವಾಕ್ಯವನ್ನು ನನಗೆ ನೆನಪಿಸುತ್ತವೆ:

“ತಗ್ಗಿಸಲ್ಪಟ್ಟವರು ಎತ್ತಲ್ಪಡುವರು.” ಆದ್ದರಿಂದ, ನಾವು ಮುಂದುವರಿಯುತ್ತೇವೆ; ಒಂದು ದಿನ  ಬಿರುಗಾಳಿ ಹಾದುಹೋಗುತ್ತದೆ ಎಂಬ ನಂಬಿಕೆಯನ್ನು ಹಿಡಿದುಕೊಳ್ಳುತ್ತೇವೆ.

ದೇವರು ನಮಗಾಗಿ ಮತ್ತೊಂದು ಬಾಗಿಲನ್ನು ತೆರೆಯುವನೆಂಬ ವಿಶ್ವಾಸವನ್ನು ನಾವು ಇಟ್ಟುಕೊಳ್ಳುತ್ತೇವೆ. ಉತ್ತಮ ಭವಿಷ್ಯದತ್ತ ಕನಸು ಕಾಣುತ್ತಾ, ಶ್ರಮಿಸುತ್ತಾ ಮುಂದುವರಿಯುತ್ತೇವೆ. ಇದು ಸುಲಭವಲ್ಲ; ಆದರೆ ನಮ್ಮ ವಿಶ್ವಾಸವೇ ನಮ್ಮನ್ನು ಸುರಂಗದ ಕೊನೆಯಲ್ಲಿ ಇರುವ ಬೆಳಕಿನ ಕಡೆಗೆ ಒತ್ತುತ್ತದೆ.

ಇದೇ ನನ್ನ ಸಾಕ್ಷ್ಯ — ನಮ್ಮ ಹೋರಾಟಗಳ ಮಧ್ಯೆಯಲ್ಲಿಯೂ ದೇವರ ನಿಷ್ಠೆಯ ಗುರುತುಗಳನ್ನು ನಾವು ಕಾಣುತ್ತೇವೆ. ನಾವು ಭಾರವನ್ನು ಹೊತ್ತಿದ್ದೇವೆ; ಆದರೆ ನಾವು ಮುರಿದುಹೋಗಿಲ್ಲ. ಸಾಧ್ಯವಾದ ನೈಜೀರಿಯಾಗಾಗಿ ನಾವು ಕೆಲಸ ಮಾಡುತ್ತೇವೆ, ನಿರೀಕ್ಷಿಸುತ್ತೇವೆ, ಪ್ರಾರ್ಥಿಸುತ್ತೇವೆ.

ಪರಾರ್ಥ ಪ್ರಾರ್ಥನೆ

ನಾವು ಪ್ರಾರ್ಥಿಸೋಣ:

ಪವಿತ್ರ ದೇವರೇ, ಜೀವದ ದಾತನೇ ಮತ್ತು ಎಲ್ಲರ ಪಾಲಕನೇ, ಅತ್ಯಂತ ಕಠಿಣ ಪರಿಸ್ಥಿತಿಗಳ ನಡುವೆಯೂ ಮುಂದುವರಿಯುವ ಬ್ಲೆಸಿಂಗ್ ಮತ್ತು ಅವರಂತೆಯೇ ಇರುವ ಎಲ್ಲರ ಸ್ಥೈರ್ಯಕ್ಕಾಗಿ ನಾವು ನಿನಗೆ ಕೃತಜ್ಞತೆಯನ್ನೂ ಸ್ತುತಿಯನ್ನೂ ಸಲ್ಲಿಸುತ್ತೇವೆ. ಜೀವನದ ಭಾರಗಳಿಂದ ದಣಿದಿರುವ ಎಲ್ಲರನ್ನೂ ನೀನು ಇನ್ನೂ ಬಲಪಡಿಸಿ, ಸಾಂತ್ವನಪಡಿಸು.

ದೇವರೇ, ಅನೇಕ ದೇಶಗಳನ್ನು ಕಾಡುತ್ತಿರುವ ಬಡತನವನ್ನು ನೀನು ಅರಿತಿದ್ದೀ. ಮಕ್ಕಳು ಹಸಿವಿನಿಂದ ಮಲಗುತ್ತಾರೆ; ಕುಟುಂಬಗಳು ಮೂಲಭೂತ ಅಗತ್ಯಗಳನ್ನು ಪೂರೈಸಲು ಹೋರಾಡುತ್ತವೆ. ನೀನೇ ಯೆಹೋವ ಈರೆ — ಮಹಾ ಪೂರೈಕೆದಾರನೆಂದು ನಾವು ನಿನ್ನನ್ನು ನೆನಪಿಸಿಕೊಳ್ಳುತ್ತೇವೆ ಮತ್ತು ನಿನ್ನ ಪೂರೈಕೆಗೆ ಮೊರೆಯಿಡುತ್ತೇವೆ. ಅವಕಾಶಗಳ ಬಾಗಿಲುಗಳನ್ನು ತೆರೆದು; ಸಹಾಯ ಮಾಡಲು ಶಕ್ತರಾದವರ ಹೃದಯಗಳನ್ನು ಮೃದುವಾಗಿಸು.

ಬಡತನ, ಒತ್ತಡ ಮತ್ತು ದಿನನಿತ್ಯದ ಕಷ್ಟಗಳಿಂದ ಹೆಚ್ಚಾಗುವ ಮಾನಸಿಕ ಆರೋಗ್ಯದ ಸಮಸ್ಯೆಗಳೊಂದಿಗೆ ಬದುಕುತ್ತಿರುವ ಎಲ್ಲರನ್ನು ನಾವು ನಿನ್ನ ಮುಂದೆ ಎತ್ತಿ ಹಿಡಿಯುತ್ತೇವೆ. ಆರ್ಥಿಕ ಪರಿಸ್ಥಿತಿಗಳು ಕುಸಿಯುವಾಗ ಮತ್ತು ಹಣದ ಮೌಲ್ಯ ಕಡಿಮೆಯಾಗುವಾಗ, ನಮ್ಮ ಸಹೋದರ-ಸಹೋದರಿಯರಲ್ಲಿ ಹೆಚ್ಚಿನವರು ನಿರಾಶೆಯೊಳಗೆ ಬೀಳುತ್ತಿರುವುದನ್ನು ನಾವು ನೋಡುತ್ತೇವೆ. ಆತ್ಮಹತ್ಯೆಯನ್ನು ಯೋಚಿಸುವವರಿಗೆ ಸಾಂತ್ವನ ನೀಡು; ಅವರ ಜೀವನಗಳು ನಿನ್ನ ದೃಷ್ಟಿಯಲ್ಲಿ ಅಪಾರ ಮೌಲ್ಯ ಹೊಂದಿವೆ ಎಂಬುದನ್ನು ಅವರಿಗೆ ತೋರಿಸು.

ಇತರೆ ಆರೋಗ್ಯ ಸಮಸ್ಯೆಗಳೊಂದಿಗೆ ಹೋರಾಡುತ್ತಿರುವವರ ಜೊತೆಯಲ್ಲಿಯೂ ನಾವು ಪ್ರಾರ್ಥಿಸುತ್ತೇವೆ. ನಮ್ಮ ಲೋಕವನ್ನು ಇನ್ನೂ ಕಾಡುತ್ತಿರುವ ಮಲೇರಿಯಾದ ಭಾರವನ್ನು ವಿಶೇಷವಾಗಿ ನೆನಪಿಸಿಕೊಂಡು, ಉತ್ತಮ ಪರಿಸರ ನಿರ್ವಹಣೆ ಮತ್ತು ಆರೋಗ್ಯಸೇವೆಗಳಿಗಾಗಿ ಪ್ರಾರ್ಥಿಸುತ್ತೇವೆ — ಈ ನಿರಂತರ ಭೀತಿಯನ್ನು ಎದುರಿಸಲು ನಮಗೆ ಶಕ್ತಿಕೊಡು.

ಯುಗಯುಗಾಂತರಗಳ ದೇವರೇ, ವೃದ್ಧಾಪ್ಯದ ಭಾರವನ್ನು ಎದುರಿಸುತ್ತಿರುವವರನ್ನು ನಾವು ನೆನಪಿಸಿಕೊಳ್ಳುತ್ತೇವೆ — ಹಿರಿಯರನ್ನು ಕಾಳಜಿ ವಹಿಸಲು ಸಿದ್ಧವಾಗಿಲ್ಲದ ಸಮಾಜಗಳಲ್ಲಿ ಬದುಕುತ್ತಿರುವವರಿಗಾಗಿ ಪ್ರಾರ್ಥಿಸುತ್ತೇವೆ. ಆರ್ಥಿಕ ಸಂಕಷ್ಟಗಳಿಂದ ತಮ್ಮ ವೃದ್ಧಾಪ್ಯಕ್ಕಾಗಿ ಯೋಜನೆ ಮಾಡಲಾಗದವರಿಗಾಗಿ ನಿನ್ನ ಪೂರೈಕೆಯನ್ನು ಕೇಳುತ್ತೇವೆ. ಹಿರಿಯರ ಜ್ಞಾನ ಮತ್ತು ಅಗತ್ಯತೆಗಳನ್ನು ಗೌರವಿಸುವ ಸಮಾಜಗಳನ್ನು ನಿರ್ಮಿಸಲು ನಮಗೆ ದಾರಿ ತೋರಿಸು.

ಜೀವನದ ಒತ್ತಡಗಳನ್ನು ತಾಳಲಾರದೆ ಹೋರಾಡುತ್ತಿರುವ ಕುಟುಂಬಗಳು ಮತ್ತು ಸಮುದಾಯಗಳಿಗಾಗಿ ನಾವು ಪ್ರಾರ್ಥಿಸುತ್ತೇವೆ. ಸಂಕಷ್ಟಗಳು ಪರಸ್ಪರ ಬೆಂಬಲಿಸುವುದನ್ನು ಕಠಿಣಗೊಳಿಸಿದಾಗ, ನಿನ್ನ ಅಕ್ಷಯ ಸಹನೆ ಮತ್ತು ಪ್ರೀತಿಯನ್ನು ನಮಗೆ ನೆನಪಿಸು. ಅದೇ ಕೃಪೆಯನ್ನು ನಮ್ಮ ಸುತ್ತಲಿರುವವರಿಗೆ ವಿಸ್ತರಿಸಲು ನಮಗೆ ಸಹಾಯಮಾಡು.

ಯೇಸು ಸ್ವಾಮಿಯೇ, ನಮ್ಮ ಮೇಲೆ ಬಿದ್ದಿರುವ ಎಲ್ಲ ಭಾರಗಳೊಂದಿಗೆ  ಬಳಿಗೆ ಬನ್ನಿರಿ ಎಂದು ನೀನು ಕರೆಯುವವನಾಗಿದ್ದೀ. ಇಲ್ಲಿದ್ದೇವೆ, ಕರ್ತನೇ! ನಮ್ಮ ಭಾರಗಳನ್ನು ಹಗುರಗೊಳಿಸಿ, ನಮ್ಮ ಚಿಂತೆಗಳನ್ನು ನಿನ್ನ ಮೇಲೆ ಹಾಕುವಂತೆ ನಮಗೆ ಸಹಾಯಮಾಡು.

ಪವಿತ್ರಾತ್ಮನೇ, ಸಂಕಟದ ಸಮಯದಲ್ಲಿ ನಮ್ಮ ಸಮಾಧಾನದ ಪ್ರಭುವಾಗಿರು. ಮುಂದಿನ ದಾರಿ ಕಾಣದಾಗ, ನಮ್ಮ ಮಾರ್ಗದರ್ಶಿಯಾಗಿರು.

ದಾರಿ ಅಸಾಧ್ಯವೆಂದು ತೋರುವಾಗಲೂ ಮುಂದುವರಿಯುವ ವಿಶ್ವಾಸವನ್ನು ನಮಗೆ ದಯಪಾಲಿಸು. ಇತರರಿಗೆ ಬೆಳಕಾಗುವಂತೆ ನಮಗೆ ನೆರವಾಗು — ನಿರೀಕ್ಷೆಯನ್ನು ಹಂಚಿಕೊಳ್ಳಲು, ಸಾಧ್ಯವಾದ ಕಡೆಗಳಲ್ಲಿ ಸಹಾಯದ ಕೈ ಚಾಚಲು.

ನೀನು ನಮ್ಮನ್ನು ಎಂದಿಗೂ ಬಿಡುವುದಿಲ್ಲ ಅಥವಾ ತ್ಯಜಿಸುವುದಿಲ್ಲ ಎಂಬ ನಿನ್ನ ವಾಗ್ದಾನ ಮತ್ತು ನಿನ್ನ ಅಚಲ ಪ್ರೀತಿಯಲ್ಲಿ ನಾವು ನಂಬಿಕೆ ಇಡುತ್ತೇವೆ. ಆಮೆನ್.

**ಕಾರ್ಯತತ್ಪರರಾಗಲು ಕರೆ (Call to Action)**

ಈ ಆರಾಧನೆಯ ಮೂಲಕ ಪ್ರಯಾಣಿಸಿ ನಾವು ನೈಜೀರಿಯಾದಲ್ಲಿಯೂ ಜಗತ್ತಿನಾದ್ಯಂತವೂ ನಮ್ಮ ಸಹೋದರಿಯರು ಹೊರುತ್ತಿರುವ ಭಾರಗಳ ಕುರಿತು ತಿಳಿದುಕೊಂಡಿದ್ದೇವೆ. ಮಹಾ ಭಾರವಹಿಸುವವನಾದ ದೇವರ ಸನ್ನಿಧಿಯಲ್ಲಿ ಈ ಎಲ್ಲಾ ವಿಚಾರಗಳನ್ನು ನಾವು ಒಟ್ಟಾಗಿ ಪ್ರಾರ್ಥನೆಯ ಮೂಲಕ ಅರ್ಪಿಸಿದ್ದೇವೆ.

ಈಗ, ನಮ್ಮನ್ನು ಪ್ರಾರ್ಥನಪೂರಕ ಕ್ರಿಯೆಗೆ ಕರೆಯುವ ಒಂದು ಮಹತ್ವದ ಕ್ಷಣಕ್ಕೆ ನಾವು ಬಂದಿದ್ದೇವೆ. ವಿಶ್ವ ಪ್ರಾರ್ಥನಾ ದಿನದ ಧ್ಯೇಯವಾಕ್ಯವು — ತಿಳಿದ ಪ್ರಾರ್ಥನೆ, ಪ್ರಾರ್ಥನಪೂರಕ ಕ್ರಿಯೆ — ನಮ್ಮ ಪ್ರಾರ್ಥನೆಗಳು ಲೋಕದ ಪರಿವರ್ತನೆಗೆ ದಾರಿ ಮಾಡಿಕೊಡಬೇಕು ಎಂದು ನಮಗೆ ನೆನಪಿಸುತ್ತದೆ.

ನಿರೀಕ್ಷೆಯೂ ವಿಶ್ರಾಂತಿಯೂ ಬೇಕಾದ ಲೋಕದಲ್ಲಿ, ಕ್ರಿಸ್ತನ ಕೈಗಳೂ ಕಾಲುಗಳೂ ಆಗಿರಬೇಕೆಂಬ ನಮ್ಮ ಬದ್ಧತೆಯನ್ನು ದೃಢಪಡಿಸುತ್ತಾ, ಈ ಕರೆಗೆ ನಾವು ಒಟ್ಟಾಗಿ ಪ್ರತಿಕ್ರಿಯಿಸೋಣ.

ನಾಯಕ: ಭಾರದಿಂದ ಕುಗ್ಗಿರುವ ಲೋಕದಲ್ಲಿ ನಮ್ಮ ನಿರೀಕ್ಷೆ ಎಲ್ಲಿದೆ?

ಸಭೆ: ನಮ್ಮ ಎಲ್ಲಾ ಭಾರಗಳನ್ನು ಹೊರುವ ಕ್ರಿಸ್ತನಲ್ಲಿ.

ನಾಯಕ: ಅತಿಯಾದ ಸಂಕಷ್ಟಗಳಿಗೆ ನಾವು ಹೇಗೆ ಪ್ರತಿಕ್ರಿಯಿಸುತ್ತೇವೆ?

ಸಭೆ: ಈ ಬಿರುಗಾಳಿ ಹಾದುಹೋಗುತ್ತದೆ ಎಂದು ನಂಬಿ, ನಾವು ಸ್ಥೈರ್ಯದಿಂದ ನಿಂತುಕೊಳ್ಳುತ್ತೇವೆ.

ನಾಯಕ: ಅನಿಶ್ಚಿತ ಕಾಲಗಳಲ್ಲಿ ನಮ್ಮ ನಂಬಿಕೆಯನ್ನು ನಾವು ಎಲ್ಲಲ್ಲಿ ಇಡುತ್ತೇವೆ?

ಸಭೆ: ಜೀವದ ಮೂಲನೂ, ಎಲ್ಲರ ಪಾಲಕನೂ ಆದ ದೇವರಲ್ಲಿ.

ನಾಯಕ: ನಮ್ಮ ಸುತ್ತಲಿರುವವರು ದಣಿದು, ಭಾರ ಹೊತ್ತಿರುವಾಗ ನಾವು ಏನು ಮಾಡಬೇಕು?

ಸಭೆ: ಕ್ರಿಸ್ತನು ನಮ್ಮ ಭಾರವನ್ನು ಹೊರುವಂತೆ, ನಾವು ಪರಸ್ಪರರ ಭಾರವನ್ನು ಹೊರುತ್ತೇವೆ.

ನಾಯಕ: ನಾವು ಮುಂದೆ ಹೋಗುವಾಗ, ನಮ್ಮ ಕ್ರಿಯೆಗೆ ಕರೆಯೇನು?

ಸಭೆ: ನಮ್ಮ ತಿಳಿದ ಪ್ರಾರ್ಥನೆಗಳನ್ನು ಪ್ರಾರ್ಥನಪೂರಕ ಕ್ರಿಯೆಯ ಮೂಲಕ ಬದುಕುವುದು.

ನಾಯಕ: ಕ್ರಿಸ್ತನ ಶಕ್ತಿಯೊಂದಿಗೆ ನಾವು ಮುಂದುವರಿಯೋಣ.

ಸಭೆ: ವಿಶ್ವಾಸ, ನಿರೀಕ್ಷೆ ಮತ್ತು ಪ್ರೀತಿಯೊಂದಿಗೆ ನಾವು ಹೋಗುತ್ತೇವೆ — ಲೋಕದಲ್ಲಿ ಬೆಳಕಾಗಲು ಬದ್ದರಾಗುತ್ತೇವೆ

ಕಾಣಿಕೆ ಸಂಗ್ರಹ(Offertory)

ಈಗ ನಾವು ನಮ್ಮ ಕಾಣಿಕೆಗಳನ್ನು ಸಲ್ಲಿಸುವ ಸಮಯಕ್ಕೆ ಬಂದಿದ್ದೇವೆ.

ಕಾಣಿಕೆಯ ಸಮಯವು ಆಶೀರ್ವಾದಿತ ಸಮಯವಾಗಿದೆ! ನೈಜೀರಿಯಾದ ಸಭೆಗಳಲ್ಲಿ, ಜನರು ತಮ್ಮ ಕಾಣಿಕೆಯನ್ನು ನೃತ್ಯಮಾಡುತ್ತಾ ಮುಂದೆ ತರುವುದು ಸಂಪ್ರದಾಯವಾಗಿದೆ — ದಾನದಲ್ಲಿ ಇರುವ ಸಂತೋಷವನ್ನು ವ್ಯಕ್ತಪಡಿಸುತ್ತಾ, ದೇವರ ಪೂರೈಕೆಯನ್ನು ಆಚರಿಸುತ್ತಾರೆ. ಈ ನೃತ್ಯವು ನಮಗೆ ನೆನಪಿಸುತ್ತದೆ: ಕೊಡುವುದು ಭಾರವಲ್ಲ, ದೇವರ ಕೃಪೆಗೆ ಪ್ರತಿಕ್ರಿಯೆಯಾಗಿ ಉಲ್ಲಾಸದಿಂದ ಸಲ್ಲಿಸುವ ಕ್ರಿಯೆಯಾಗಿದೆ. ಇಂದೂ ನಾವು ಅದೇ ಸಂತೋಷ ಮತ್ತು ಕೃತಜ್ಞತೆಯ ಮನೋಭಾವದೊಂದಿಗೆ ನಮ್ಮ ಕಾಣಿಕೆಯನ್ನು ತರೋಣ.

[ಪ್ರತಿ ದೇಶವು ತಮ್ಮ WDP ರಾಷ್ಟ್ರೀಯ ಸಮಿತಿಯ ನಿರ್ಧಾರದಂತೆ, ಕಾಣಿಕೆಯ ಬಳಕೆಯ ವಿವರವನ್ನು ಇಲ್ಲಿ ಸೇರಿಸಬಹುದು.]

ನಿಮ್ಮ ಉದಾರ ದಾನಗಳು ವಿಶ್ವ ಪ್ರಾರ್ಥನಾ ದಿನದ ಸೇವೆಯನ್ನು ಬೆಂಬಲಿಸಿ, ಇಂದು ನಾವು ಪ್ರಾರ್ಥಿಸಿದ ಕೆಲವು ಭಾರಗಳನ್ನು ಹಗುರಗೊಳಿಸಲು ಸಹಾಯಮಾಡಲಿವೆ. ನೀವು ನೃತ್ಯಮಾಡುತ್ತಾ, ನಡೆಯುತ್ತಾ, ಅಥವಾ ಕುಳಿತೇ ಕಾಣಿಕೆಯನ್ನು ಸಲ್ಲಿಸಿದರೂ, ನಿಮ್ಮ ಕಾಣಿಕೆಯು ಇತರರ ಭಾರವನ್ನು ಹಗುರಗೊಳಿಸುವ ನಿಮ್ಮ ಬದ್ಧತೆಯ ಸಂಕೇತವಾಗಿರಲಿ. ನಮ್ಮ ಪ್ರಾರ್ಥನೆಗಳಂತೆ, ನಮ್ಮ ದಾನಗಳೂ ಲೋಕದಲ್ಲಿ ದೇವರ ಪ್ರೀತಿಯ ಸ್ಪಷ್ಟ ಅಭಿವ್ಯಕ್ತಿಯಾಗಿರಲಿ.

ಕಾಣಿಕೆ ಸಂಗೀತ – “His Eye Is on the Sparrow”

280

8.7.8.7.8.7.8.7.

1. ದೇವರಾಶ್ರಯದಿಂದ

ಬಾಳಲಿ ಸೇವಕ ಸ್ತೋತ್ರ;

ನನ್ನ ಸ್ವಂತ ಯತ್ನವಲ್ಲ

ಪೂರ್ಣವಾಗಿ ವ್ಯರ್ಥವೇ;

ಬುದ್ಧಿ ಬಲ ಕಾಲ ಸೊತ್ತು

ಕಲಿತ ಶ್ರಮ ಕೊಡುವೆನು;

ಯಾವದನ್ನೂ ಸ್ವತಃವೆಂದು

ಎಂದೂ ಹೇಳಲಾರೆನು.

2. ಹೃದಯದಿ ಒಂದು ಅಂಶ

ವ್ಯರ್ಥವಾಗದಿರಲಿ;

ನೀಗೆ ಕೊಡುವಂತ ಆತ

ಆಜ್ಞಮಾಡಲಿಲ್ಲವೇ?

ಮನಃಪೂರ್ವಕವಾಗಿ ನಾನು

ಅರ್ಪಣೆ ಕೊಡುತ್ತೇನೆ;

ವ್ಯಕ್ತಿತ್ವವನ್ನು ಎಂದೂ

ಮರೆಚೆದ ಮನವೇ.

3. ದೇವರಾಜ್ಯ ಬೆಳಗೊಳ್ಳ

ಬೆಂತೆಗೊಂಡೋ ನಿನಗೆ?

ಇದಕ್ಕಾಗಿ ಹಣ ತಾನೇ,

ಕೊಡಬೇಕು ತಕ್ಷಣ;

ಎಲ್ಲವನ್ನೂ ಕರ್ಕಗಾಗಿ

ಕೊಡಬೇಕು ನಾನಯ್ಯೋ;

ಸರ್ವಭಾಗ ಆತಗಾಗಿ

ಕೊಡುವವನೇ?

4. ದೇವರಿಂದಲೇ ದೊರೆಯು

ಮುಕ್ತಿಕೊಳಲಾರನು;

ನ್ಯಾಯವಾಗಿ ಕೊಡುವನು,

ಆತ್ಮವಿಶ್ವಾಸವು.

ಅಂಜತದ್ದ ಕೊಡಬೇಡ

ನಮ್ಮ ಸೌಕರ್ಯದಿಂದ;

ಹರ್ಷದಿಂದಲೇ ಕೊಡು

ನಿಜವಾಗಿ ಹೊಂದ್ವನು.

## ಮುಕ್ತಾಯದ ಮಾತುಗಳು (Closing Words)

ನಾಯಕ 1: "His Eye Is on the Sparrow" ಎಂಬ ಗೀತೆಯ ರಾಗ ನಿಧಾನವಾಗುವ ಗಳಿಗೆಯಲ್ಲಯೇ, ದೇವರ ಕಾಳಜಿಯ ನೆನಪು ನಮ್ಮ ಮುಂದೆ ನಿಲ್ಲುತ್ತದೆ. ದೇವರು ಚಿಕ್ಕ ಹಕ್ಕಿಯನ್ನು ಗಮನಿಸುವಂತೆ, ನಮ್ಮ ಭಾರಗಳನ್ನೂ ಆತ ನೋಡುತ್ತಾನೆ — ದಬ್ಬಾಳಿಕೆಯ ಭಾರ, ನಷ್ಟದ ನೋವು, ಬಡತನ ಮತ್ತು ಮಾನಸಿಕ ಆರೋಗ್ಯದ ಹೋರಾಟಗಳನ್ನು ನೋಡುತ್ತಾನೆ. ನಾವು ಕೇಳಿದ ಕಥೆಗಳ ಮೂಲಕ, ಅತ್ಯಂತ ಕಠಿಣ ಸಮಯಗಳಲ್ಲಿಯೂ ದೇವರು ಹೇಗೆ ಶಕ್ತಿ ಮತ್ತು ನಿರೀಕ್ಷೆಯನ್ನು ನೀಡುತ್ತಾನೆ ಎಂಬುದನ್ನು ನಾವು ಕಂಡಿದ್ದೇವೆ.

ನಾಯಕ 2: ಇಂದು ನಾವು ನೈಜೀರಿಯಾದ ನಮ್ಮ ಸಹೋದರಿಯರ ಜೀವನಗಳಲ್ಲಿ ದೇವರ ಕೈ ಕಾರ್ಯನಿರ್ವಹಿಸುವುದನ್ನು ನೋಡಿದ್ದೇವೆ. ಚಿಯೋಮಾಳ ಕಥೆಯಲ್ಲಿ, ಅವಳ ಶಾಲಾ ಸ್ನೇಹಿತರ ಮೂಲಕ ದೇವರು ಅವಳ ಅಂತರಂಗ ಮೌಲ್ಯವನ್ನು ನೆನಪಿಸಿ, ಅವಮಾನ ಮತ್ತು ಕಡಿಮೆ ಸ್ವಮೌಲ್ಯದ ಭಾರವನ್ನು ತೆಗೆದನು. ವಿಧವೆಯಾದ ನಮ್ಮ ಸಹೋದರಿ ಬಿಯಾಟ್ರಿಸ್ ಅವರ ಸುತ್ತಲಿನ ಸಮುದಾಯದ ಮೂಲಕ, ವ್ಯವಸ್ಥಿತ ದಬ್ಬಾಳಿಕೆಯನ್ನು ಪ್ರೀತಿ ಹೇಗೆ ಜಯಿಸಬಹುದು ಎಂಬುದನ್ನು ದೇವರು ತೋರಿಸಿದನು. ಜಾಟೋ ಅವರ ಕಥೆಯಲ್ಲಿ, ಹಿಂಸೆಯ ನಡುವೆಯೂ ವಿಶ್ವಾಸವನ್ನು ಉಳಿಸುವ ದೇವರ ಶಕ್ತಿಯನ್ನು ಕಂಡು, ಶಾಂತಿ ಮತ್ತು ಪರಸ್ಪರ ಅರ್ಥಮಾಡಿಕೊಳ್ಳುವ ಸಾಧನರಾಗಲು ನಮಗೆ ಸವಾಲು ಹಾಕಲಾಯಿತು. ಬ್ಲೆಸಿಂಗ್ ಅವರ ಸಾಕ್ಷ್ಯದಲ್ಲಿ, ಬಡತನ ಮತ್ತು ನಿರಾಶೆಯ ನಡುವೆಯೂ ನಿರೀಕ್ಷೆ ಮತ್ತು ಸ್ಥೈರ್ಯ ಹೇಗೆ ಅರಳಬಹುದು ಎಂಬುದನ್ನು ದೇವರು ಪ್ರಕಟಿಸಿದನು.

ನಾಯಕ 3: ಈ ಸ್ಥಳವನ್ನು ತೊರೆಯುವಾಗ, ಪರಸ್ಪರರ ಭಾರಗಳನ್ನು ಎತ್ತುವಲ್ಲಿ ದೇವರು ನಮ್ಮನ್ನು ಸಹಕಾರಿಗಳನ್ನಾಗಿ ಕರೆಯುತ್ತಾನೆ ಎಂಬುದನ್ನು ನೆನಪಿಸಿಕೊಳ್ಳೋಣ. ಪ್ರಾರ್ಥನಾಪೂರಕ ಕ್ರಿಯೆಗೆ ದೇವರು ನಮ್ಮನ್ನು ಕರೆಯುತ್ತಾನೆ — ಇತರರ ಮೌಲ್ಯವನ್ನು ನೆನಪಿಸುವ ಸ್ನೇಹಿತರಾಗಲು, ದುರ್ಬಲರನ್ನು ಬೆಂಬಲಿಸುವ ಸಮುದಾಯವಾಗಲು, ಹಿಂಸೆಗೆ ಒಳಗಾದವರ ಪರವಾಗಿ ಧ್ವನಿಯಾಗಲು, ಮತ್ತು ಹೋರಾಡುತ್ತಿರುವವರಿಗೆ ನಿರೀಕ್ಷೆಯನ್ನು ನೀಡುವ ಕೈಗಳಾಗಲು. ನಮ್ಮ ಲೋಕಕ್ಕೆ ಸಾಂತ್ವನ ಮತ್ತು ನ್ಯಾಯವನ್ನು ತರಲು ದೇವರೊಂದಿಗೆ ಸಹಕರಿಸೋಣ. ಕ್ರಿಸ್ತನ ದೇಹವಾಗಿರುವ ನಾವು, ಯೇಸುವಿನ ವಾಗ್ದಾನದಿಂದ ಶಶಕ್ತರನ್ನಾಗಿ ಪರಿವರ್ತಿಸಿದ್ದಾನೆ:

"ಭಾರದಿಂದ ದಣಿದಿರುವ ಎಲ್ಲರೂ ನನ್ನ ಬಳಿಗೆ ಬನ್ನಿರಿ; ನಾನು ನಿಮಗೆ ವಿಶ್ರಾಂತಿಯನ್ನು ಕೊಡುತ್ತೇನೆ."

ಈ ಭರವಸೆಯು ನಮಗೆ ಶಾಂತಿಯನ್ನು ಮಾತ್ರವಲ್ಲ, ಕ್ರಿಯೆಗೆ ಪ್ರೇರಣೆಯನ್ನೂ ನೀಡುತ್ತದೆ. ಕ್ರಿಸ್ತನ ಜೀವಂತ ವಿಸ್ತರಣೆಗಳಾಗಿ ನಾವು ಮುಂದುವರಿದು, ನಾವು ಎದುರಿಸುವ ಪ್ರತಿಯೊಬ್ಬರಿಗೂ ದೇವರ ವಿಶ್ರಾಂತಿ ಮತ್ತು ಪರಿಹಾರವನ್ನು ತರುವವರಾಗೋಣ. ಈ ರೀತಿಯಲ್ಲಿ, ನಾವು ದೇವರಲ್ಲಿ ನಮ್ಮದೇ ವಿಶ್ರಾಂತಿಯನ್ನು ಕಂಡುಕೊಳ್ಳುವದಷ್ಟೇ ಅಲ್ಲ, ಇತರರಿಗಾಗಿ ದೈವಿಕ ವಿಶ್ರಾಂತಿಯ ಸಧನಗಳಾಗುತ್ತೇವೆ.

## ಥೀಮ್ ಗೀತೆಯ ಪುನರಾವರ್ತನೆ

© 2024 ವಿಶ್ವ ಪ್ರಾರ್ಥನಾ ದಿನ ಅಂತರರಾಷ್ಟ್ರೀಯ ಸಮಿತಿ, ಇಂಕ್.

“ನಾನು ನಿಮಗೆ ವಿಶ್ರಾಂತಿಯನ್ನು ನೀಡುವೆನು: ಬನ್ನಿರಿ” ಈ ವಿಷಯವನ್ನು 2026ರ ವಿಶ್ವ ಪ್ರಾರ್ಥನಾ ದಿನದ ವಾರ್ಷಿಕ ಆಚರಣೆಯ ಆರಾಧನಾ ಸೇವೆ ಮತ್ತು ಶೈಕ್ಷಣಿಕ ಚಟುವಟಿಕೆಗಳಿಗಾಗಿ ನೈಜೀರಿಯಾದ ವಿಶ್ವ ಪ್ರಾರ್ಥನಾ ದಿನ ಸಮಿತಿಯು ಸಿದ್ಧಪಡಿಸಿದೆ. WDP ಸಂಪನ್ಮೂಲಗಳು ರಾಷ್ಟ್ರೀಯ ಅಥವಾ ಸ್ಥಳೀಯ ಸಮಿತಿಗಳು ಮತ್ತು ಅವರ ಸಹಭಾಗಿತ್ವ ಸಂಸ್ಥೆಗಳು ಆಯೋಜಿಸುವ WDP ಕಾರ್ಯಕ್ರಮಗಳಿಗಾಗಿ ಮಾತ್ರ ಉಪಯೋಗಕ್ಕೆ ಉದ್ದೇಶಿತವಾಗಿವೆ. ಇತರೆ ಯಾವುದೇ ಬಳಕೆಗೆ, WDP 2024 ಸಂಪನ್ಮೂಲ ಪ್ಯಾಕೆಟ್‌ನ ವಿಷಯವನ್ನು WDP ಅಂತರರಾಷ್ಟ್ರೀಯ ಸಮಿತಿಯ ಅನುಮತಿಯಿಲ್ಲದೆ ಪುನರ್ಮುದ್ರಣ ಮಾಡಬಾರದು.

ಮಿತವಾದ ಪುನರುತ್ಪಾದನಾ ಹಕ್ಕುಗಳು ನೀಡಲ್ಪಟ್ಟಿವೆ — ಬೈಬಲ್ ಅಧ್ಯಯನ, ಆರಾಧನಾ ಸೇವೆ, ದೇಶದ ಹಿನ್ನೆಲೆ, ಮಕ್ಕಳ ಕಾರ್ಯಕ್ರಮ, ಕಲಾಕೃತಿ ಮತ್ತು ಕಲಾವಿದರ ವಿವರಣೆ, WDP ರಚಿಸಿದ ಗೀತೆಗಳು ಮತ್ತು ಚಿತ್ರಗಳನ್ನು, ಯೋಗ್ಯ ಕೃತಜ್ಞತೆ ನೀಡಿದರೆ, WDP ಚಟುವಟಿಕೆಗಳಿಗಾಗಿ ಮುದ್ರಿತ ಅಥವಾ ಎಲೆಕ್ಟ್ರಾನಿಕ್ ರೂಪದಲ್ಲಿ ಬಳಸಬಹುದು. WDP ರಾಷ್ಟ್ರೀಯ/ಪ್ರಾದೇಶಿಕ ಸಮಿತಿಗಳಿಗೆ ಈ ಸಂಪನ್ಮೂಲಗಳನ್ನು WDP ಕಾರ್ಯಕ್ರಮಗಳ ಉದ್ದೇಶಕ್ಕಾಗಿ ಮರುಮಾರಾಟ ಮಾಡುವ ಅನುಮತಿ ಇದೆ.

WDPIC ಗೆ ಸಂಪರ್ಕ ಹೊಂದಿರುವ ರಾಷ್ಟ್ರೀಯ ಸಮಿತಿಗಳು ಮಾತ್ರ ಈ ಸಂಪನ್ಮೂಲ ಪ್ಯಾಕೆಟ್ ಅಥವಾ ಅದರ ಭಾಗಗಳನ್ನು ಆನ್‌ಲೈನ್‌ನಲ್ಲಿ ಲಭ್ಯವಾಗಿಸಬಹುದು. ಆನ್‌ಲೈನ್‌ನಲ್ಲಿ ಲಭ್ಯವಾಗಿಸುವ ಸಮಿತಿಗಳು, ಅವುಗಳನ್ನು ಬಳಸುವ ಗುಂಪುಗಳು ಮತ್ತು ವ್ಯಕ್ತಿಗಳು ಸಮಿತಿಗೆ ಜವಾಬ್ದಾರರಾಗಿರುವುದನ್ನು ಖಚಿತಪಡಿಸಬೇಕು.

ಆರಾಧನಾ ಸೇವೆ ಮತ್ತು ಮಕ್ಕಳ ಕಾರ್ಯಕ್ರಮಕ್ಕೆ ಸೂಚಿಸಲಾದ ಗೀತೆಗಳು ಪ್ರಕಟಕರ ಹಕ್ಕುಸ್ವಾಮ್ಯ ಮಾಹಿತಿಯನ್ನು ಒಳಗೊಂಡಿವೆ. ಗೀತೆಗಳನ್ನು ಪುನರ್ಮುದ್ರಿಸಲು ಅಥವಾ ಅನುವಾದಿಸಲು ಪ್ರಕಟಕರ ಅನುಮತಿ ಅಗತ್ಯವಿದೆ. WDP ಕಾರ್ಯಕ್ರಮಗಳಿಗಾಗಿ ಮೂಲತಃ ರಚಿಸಲಾದ ಗೀತೆಗಳನ್ನು ಮಾತ್ರ ಪುನರ್ಮುದ್ರಿಸಲು ಅಥವಾ ಅನುವಾದಿಸಲು WDPIC ಅನುಮತಿ ನೀಡುತ್ತದೆ.WDP ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಸಂಗ್ರಹಿಸಲಾದ ಯಾವುದೇ ಅರ್ಪಣೆ ಅಥವಾ ನಿಧಿಗಳನ್ನು ಸಂಬಂಧಿಸಿದ WDP ಸಮಿತಿಗಳಿಗೆ ವರದಿ ಮಾಡಬೇಕು. ಶಾಸ್ತ್ರ ವಾಕ್ಯಗಳು New Revised Standard Version ಬೈಬಲ್‌ನಿಂದ ತೆಗೆದುಕೊಳ್ಳಲ್ಪಟ್ಟಿವೆ, © 1989, National Council of Churches of Christ in the U.S.A. — ಅನುಮತಿಯೊಂದಿಗೆ ಬಳಸಲಾಗಿದೆ. ಎಲ್ಲಾ ಹಕ್ಕುಗಳು ಕಾಯ್ದಿರಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:

jyoti@ncci1914.com,  ncci@ncci1914.com and

admin@worlddayofprayer.net